# ಧೈರ್ಯದ ದಾರಿ

ನಿಮ್ಮ ನಂಬಿಕೆಯ ಧ್ವನಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

EMAIL : dairyadadaari@gmail.com ಸಂಪುಟ: 01 ಸಂಚಿಕೆ: 70

ಬೆಲೆ ರೂ : 2.00

ರಾಯಚೂರು

ಪುಟ: 4

RNI NO: KNKAN/25/A2795 ಶುಕ್ರವಾರ: 20-02-2026


**SEHRI & IFTARI TIME**

DAY : FRIDAY

RAMZAN : 02

DATE: 20.02.2026

END TIME OF SEHRI :5:28 AM

FAJAR AZAAN : 5:33 AM

IFTAR TIME : 6:27 PM

ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ
ಕಾರ್ಯದರ್ಶಿಗಳು : ಮತ್ ವಾಲೆ
ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ
ಸಂಪಾದಕರು : ಧೈರ್ಯದ ದಾರಿ ಕನ್ನಡ
ದಿನಪತ್ರಿಕೆ




ಸುದ್ದಿ ಮತ್ತು ಜಾಹೀರಾತಿಗಾಗಿ

6360866626


# ಉಚಿತ ಯೋಜನೆ, ಸುಪ್ರೀಂ ಗರಂ

**ನವದೆಹಲಿ.ಫೆ19–**ಚುನಾವಣೆ ಸಮೀಪಿಸಿದಾಗ ರಾಜ್ಯ ಸರ್ಕಾರಗಳು ಘೋಷಿಸುವ 'ಉಚಿತ ಯೋಜನೆಗಳು' ಹಾಗೂ ಉಚಿತ ನೇರ ಹಣ ವರ್ಗಾವಣೆ (ಡೈರೆಕ್ಟ್ ಕ್ಯಾಶ್ ಟ್ರಾನ್ಸ್‌ಫರ್) ಕುರಿತು , ಸುಪ್ರೀಂಕೋ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಇಂತಹ 'ಫ್ರೀಬೀಸ್' ಸಂಸ್ಕೃತಿ ದೇಶದ ದೀರ್ಘಕಾಲಿಕ ಅಭಿವೃದ್ಧಿಗೆ ಅಡ್ಡಿಯಾಗಬಹುದು ಎಂದು ನ್ಯಾಯಾಲಯ ಗಂಭೀರ ಎಚ್ಚರಿಕೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ಪೀಠದ ನ್ಯಾಯಮೂರ್ತಿಗಳಾದ ಜೋಮಾಲ್ಯಾ ಭಗೀಚ ಹಾಗೂ ವಿಪುಲ್ ಪಾಂಚೋಗಿ ಅವರು ತಮಿಳುನಾಡು ವಿದ್ಯುತ್ ವಿತರಣೆ ಕಂಪನಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸುವ ಸಂದರ್ಭದಲ್ಲಿ ಈ ಮೌಖಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತು.

ರಾಜ್ಯ ಸರ್ಕಾರಗಳು ಚುನಾವಣೆಗೆ ಮುನ್ನ ಅತಿಯಾಗಿ ಉಚಿತ ಸೌಲಭ್ಯಗಳನ್ನು ಘೋಷಿಸುತ್ತಿರುವ ಪ್ರವೃತ್ತಿ ಕುರಿತು ಪೀಠ ಪ್ರಶ್ನೆ ಎತ್ತಿತು. "ರಾಜ್ಯ ಲಾಭಾಂಶದಲ್ಲಿದ್ದರೂ ಸಹ ಆ ಹಣವನ್ನು ರಸ್ತೆ, ಆಸ್ಪತ್ರೆ, ಶಾಲೆಗಳಂತಹ ಮೂಲಸೌಕರ್ಯ ಅಭಿವೃದ್ಧಿಗೆ ಬಳಸುವುದು ಅವರ ಕರ್ತವ್ಯವಲ್ಲವೇ ಅದರ ಬದಲು ಆಹಾರ, ಬಟ್ಟೆ, ವಿದ್ಯುತ್, ನೇರ ಹಣ ವರ್ಗಾವಣೆ ಹೀಗೆ ನಿರಂತರವಾಗಿ ವಿತರಣೆ ಮಾಡಿದರೆ ದೇಶದ ಅಭಿವೃದ್ಧಿಗೆ ಧಕ್ಕೆಯಾಗುವುದಿಲ್ಲವೇ



ಎಂದು ಮುಖ್ಯ ನ್ಯಾಯಮೂರ್ತಿ ಪ್ರಶ್ನಿಸಿದರು.

ಸಾಮಾಜಿಕ ನ್ಯಾಯದ ಅಂಗವಾಗಿ ಬಡವರು, ಹಿಂದುಳಿದವರಿಗೆ ನೆರವು ನೀಡುವುದು ರಾಜ್ಯದ ಕರ್ತವ್ಯ ಎಂಬುದನ್ನು ನ್ಯಾಯಾಲಯ ಒಪ್ಪಿಕೊಂಡಿತು. ಆದರೆ "ಪಾವತಿಸಲು ಸಾಮರ್ಥ್ಯವಿರುವವರಿಗೂ ಮತ್ತು ಸಾಧ್ಯವಿಲ್ಲದವರಿಗೂ ವ್ಯತ್ಯಾಸ ಮಾಡದೆ ಉಚಿತ ಸೌಲಭ್ಯ ನೀಡುವುದು 'ಅನುಗ್ರಹ ನೀತಿ'ಯಾಗುತ್ತದೆ. ಇದು ಆರ್ಥಿಕ ಬೆಳವಣಿಗೆಗೆ ಅನುಕೂಲಕರವಲ್ಲ" ಎಂದು ಅಭಿಪ್ರಾಯಪಟ್ಟಿತು.

"ರಾಜ್ಯಗಳು ಕೊರತೆಯಲ್ಲಿದ್ದರೂ ಸಹ ಹಣ ಹಂಚಿಕೆಯನ್ನು ಮುಂದುವರಿಸುತ್ತಿವೆ. ಆ ಹಣ ಎಲ್ಲಿಂದ ಬರುತ್ತದೆ? ಅದನ್ನು ದೀರ್ಘಕಾಲಿಕ ಅಭಿವೃದ್ಧಿ ಯೋಜನೆಗಳಿಗೆ ಮೀಸಲಿಡಬಾರದೇ ಎಂದು ಪೀಠ ಪ್ರಶ್ನಿಸಿತು.

ನೇರ ಹಣ ವರ್ಗಾವಣೆ ಯೋಜನೆಗಳ ಕುರಿತು ಕೂಡ ಪೀಠ ಕಳವಳ ವ್ಯಕ್ತಪಡಿಸಿತು. "ಜನರಿಗೆ ಉದ್ಯೋಗಾವಕಾಶ ಸೃಷ್ಟಿಸಿ, ಅವರಲ್ಲಿ ಸ್ವಾಭಿಮಾನ ಹಾಗೂ ಸ್ವಾವಲಂಬನೆ ಬೆಳೆಸುವುದು ಮುಖ್ಯ. ಎಲ್ಲವನ್ನೂ ಉಚಿತವಾಗಿ ನೀಡಿದರೆ ಜನರು ಕೆಲಸ ಮಾಡಲು ಪ್ರೇರಿತರಾಗುವುದೇ? ಎಂದು ಪ್ರಶ್ನಿಸಿತು.

ಚುನಾವಣೆಗಳಿಗೆ ಮುನ್ನ ಏಕಾಏಕಿ ಹೊಸ ಯೋಜನೆಗಳನ್ನು ಘೋಷಿಸುವ ಬಗ್ಗೆ ಉಲ್ಲೇಖಿಸಿದ ಮುಖ್ಯ ನ್ಯಾಯಮೂರ್ತಿ, "ಇದು ರಾಷ್ಟ್ರ ನಿರ್ಮಾಣದ ಮಾರ್ಗವೇ ರಾಜಕೀಯ ನಾಯಕರು, ಪಕ್ಷಗಳು ಹಾಗೂ ನೀತಿನಿರ್ಮಾತರು ಈ ನೀತಿಗಳನ್ನು ಪುನರ್ವಿಮರ್ಶೆ ಮಾಡಬೇಕಾದ ಸಮಯ ಬಂದಿದೆ" ಎಂದು ಹೇಳಿದರು.

ಈ ವಿಚಾರಣೆ ವೇಳೆ ನ್ಯಾಯಾಲಯದ ಕಠಿಣ ಟೀಕೆಗಳು 'ಫ್ರೀಬೀಸ್ ಸಂಸ್ಕೃತಿ' ಕುರಿತು ರಾಷ್ಟ್ರವ್ಯಾಪಿ ಚರ್ಚೆಗೆ ಕಾರಣ ವಾಗುವ ಸಾಧ್ಯತೆ ಇದೆ.

## ಮಾನ್ವಿ ಎನ್ಪಿಎಸ್ ನೌಕರರ ಸಂಘದ ಪದಾಧಿಕಾರಿಗಳ ಆಯ್ಕೆ: 'ತಾಲೂಕ ಅಧ್ಯಕ್ಷರಾಗಿ ಸುರೇಶ ಕುಮಾರ ಪುನರ್ ಅಯ್ಕೆ'



ಧೈರ್ಯದ ದಾರಿ

**ಮಾನ್ವಿ,ಫೆ.19–** ಕರ್ನಾಟಕ ರಾಜ್ಯ ಸರ್ಕಾರಿ ಎನ್ಪಿಎಸ್ ನೌಕರರ ಸಂಘ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.ತಾಲೂಕ ಅಧ್ಯಕ್ಷರಾಗಿ ಸುರೇಶ ಕುಮಾರ ಎರಡನೇ ಅವಧಿಗೆ ಮರು ಆಯ್ಕೆಯಾದರು.

ಪಟ್ಟಣದಲ್ಲಿ ಇತ್ತಿಚ್ಚೆಗೆ ನಡೆದ ತಾಲೂಕು ಸರ್ಕಾರಿ ಎನ್ಪಿಎಸ್ ನೌಕರರ ನೂತನ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ

ರಾಜ್ಯ ಸಂಘಟನೆಯ ಆದೇಶದ ಮೇರೆಗೆ ವಿವಿಧ ಸ್ಥಾನಗಳಿಗೆ ಜಿಲ್ಲಾ ಸಂಘದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ನೇತೃತ್ವದಲ್ಲಿ ಮಾನ್ವಿ ತಾಲೂಕಿನ ಎಲ್ಲಾ ಇಲಾಖೆಗಳ ಎನ್ಪಿಎಸ್ ನೌಕರರ ಸಮ್ಮುಖದಲ್ಲಿ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ತಾಲೂಕ ಅಧ್ಯಕ್ಷರಾಗಿ ಸುರೇಶ ಕುಮಾರ ಸಹ ಶಿಕ್ಷಕರು ಬಾಲಕರ ಸರ್ಕಾರಿ ಪ್ರೌಢಶಾಲೆ ಮಾನ್ವಿ ಅವರು ಎರಡನೇ ಅವಧಿಗೆ ಮರು ಆಯ್ಕೆಯಾದರು. ಗೌರವಾಧ್ಯಕ್ಷರಾಗಿ ಯಂಕಯ್ಯ ಶೆಟ್ಟಿ ಆರೋಗ್ಯ ಇಲಾಖೆ, ಪ್ರಧಾನ ಕಾರ್ಯದರ್ಶಿಯಾಗಿ ಹರ್ಷವರ್ಧನ ಅನುದಾನಿತ ಶಾಲಾ ವಿಭಾಗ, ಖಜಾಂಚಿಗಳು ತಿಮ್ಮೇಶ್ ನಾಯಕ ಆರೋಗ್ಯ ಇಲಾಖೆ, ಉಪಾಧ್ಯಕ್ಷರಾಗಿ ಸೈ.ಮುಜೀಬ್

ಕಾಲೇಜು ಶಿಕ್ಷಣ ಇಲಾಖೆ ರೇಣವ್ವ ಕಟ್ನಳ್ಳಿ

ಪ್ರಾಥಮಿಕ ಶಿಕ್ಷಣ ಇಲಾಖೆ, ನೀಲಕಂಠ ಜಿಪಿಟಿ ಶಾಲಾ ಶಿಕ್ಷಕರ ವಿಭಾಗ, ವೀರೇಶ ಯಾದವ ಕೃಷಿ ಇಲಾಖೆ,ಜಂಟಿ ಕಾರ್ಯದರ್ಶಿಯಾಗಿ ಜಗದೀಶ್ ಸಹಕಾರಿ ಇಲಾಖೆ, 2ನೇಪುಟಕ್ಕೆ

## ಮಾನ್ವಿ: ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರುಗೆ ಚುಟುಕು ಸಾಹಿತ್ಯ ಪರಿಷತ್ತಿನಿಂದ ಸನ್ಮಾನ



ಧೈರ್ಯದ ದಾರಿ

**ಮಾನ್ವಿ,ಫೆ.19–** ಫೆ.28ರಂದು ನಡೆಯಲಿರುವ 11ನೇ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಹಿರಿಯ ಸಾಹಿತಿ,ಬರಹಗಾ ರರಾದ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು ಅವರನ್ನು ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು.

ಬುಧವಾರ ಸಂಜೆ ಪಟ್ಟಣದ ಕಲ್ಯಾಣ ವೈದ್ಯಾಲ ಯದಲ್ಲಿ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೊಹಮ್ಮದ್ ಮುಜೀಬ್, ಗೌರವಾಧ್ಯಕ್ಷರಾದ ಮಹಾದೇವಪ್ಪ ಅವರ ನೇತೃತ್ವದಲ್ಲಿ ಪದಾಧಿಕಾರಿಗಳು ಫೆ.28ರಂದು ನಡೆಯಲ್ಲಿರುವ ತಾಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಹಿರಿಯ ಸಾಹಿತಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ಹಾಗೂ ಅವರ ಧರ್ಮಪತ್ನಿ ಅವರನ್ನು ಅಭಿನಂದಿಸಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಚುಸಾಪ ಉಪಾಧ್ಯ ಕ್ಷರಾದ ಡಾ. ಬಸವರಾಜ್ ಸುಂಕೇಶ್ವರ್, ರಾಮಪ್ಪ ಹೊಳೆಪ್ಪನವರ್ ಆಂಜನೇಯ ನಾಯಕ ನಸಲಾಪುರ ಖಜಾಂಚಿ ಎಂಆರ್ ವೆಂಕಯ್ಯ ಶೆಟ್ಟಿ , ಜಂಟಿ ಕಾರ್ಯದರ್ಶಿ ಶ್ರೀನಿವಾಸ್ ವೈ ಶಿಕ್ಷಕರು ಕುಮಾರಿ ಭಾರ್ಗವಿ ದೇಸಾಯಿ, ಕಚೇರಿ ಕಾರ್ಯದರ್ಶಿ ಶಿವಕುಮಾರ್ ಸಜ್ಜನ್, ಗೌರವ ಸಲಹೆಗಾರ ಜೆ.ಪಿ.ಅಂಬರೀಶ್, ಕಾನೂನು ಸಲಹೆಗಾರರು ವಿಶ್ವನಾಥ್ ಬಿ ನಂದಿಹಾಳ್ ವಕೀಲರು, ಮನೋಹರ್ ವಿಶ್ವಕರ್ಮ ವಕೀಲರು,

ಕಾರ್ಯಕಾರಿ ಸಮಿತಿ ಸದಸ್ಯರು ಬಿ, ಚನ್ನಬಸಯ್ಯಸ್ವಾಮಿ, ಯಮುನಪ್ಪ ಮುಖ್ಯ ಗುರುಗಳು, ಗೋವಿಂದ್ ರಾಜ್ ಪತ್ರಕರ್ತರು, ಉಮೇಶಯ್ಯ, ಟಿ .ಸಿ.ಚೆನ್ನರೆಡ್ಡಿ ನಿವೃತ್ತ ಪಿಡಿಒ, ಡಿಜಿ ಕರ್ಕಿಹಳ್ಳಿ ಸರ್ವಮಂಗಳ,ಶರಣಬಸವ, ಸಂಜೀವಪ್ಪ ಚಲವಾದಿ ಶಿಕ್ಷಕರು, ಗೌರವಸಲಹೆಗಾರು,ನವೀನ್ ಪತ್ರ ಕರ್ತರು, ಅಶ್ವಿನಿ ಶಿಕ್ಷಕಿ, ಮಧುಪಾಂಡೆ ನಿವೃತ್ತ ಶಿಕ್ಷಕಿ, ಶಿವಕುಮಾರ್ ಚಲ್ಮಲ್ ಡಾ.ಚನ್ನಬಸವ ಮಾಡಗಿರಿ, ಶರಣಬಸವ ಪೂಜಾರಿ ಸೇರಿದಂತೆ ಅನೇಕರಿದ್ದರು.

## ಪಟ್ಟಣ ಪಂಚಾಯತ್‌ನಲ್ಲಿ ಶಿವಾಜಿ ಜಯಂತಿ ಸಂಭ್ರಮ: ಪ. ಪಂ. ಅಧ್ಯಕ್ಷ ಹಾಜಿ ಚೌದ್ರಿ ಅವರಿಂದ ಪುಷ್ಪನಮನ.




ಧೈರ್ಯದ ದಾರಿ

**ಸಿರವಾರ,ಫೆ.19** ಇಲ್ಲಿನ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ಇಂದು ಭಾರತದ ಧೀಮಂತ ನಾಯಕ, ಸ್ವರಾಜ್ಯದ ಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜ್ ಅವರ ಜಯಂತಿಯನ್ನು ಅತ್ಯಂತ ಸಡಗರ ಮತ್ತು ಗೌರವಪೂರ್ವಕವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಪಟ್ಟಣ ಪಂಚಾಯತ್‌ನ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳು ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಜ್ಯೋತಿ ಬೆಳಗುವ ಮೂಲಕ ಚಾಲನೆ ನೀಡಿದರು.

ಶಿವಾಜಿ ಮಹಾರಾಜರ ಆಡಳಿತಾತ್ಮಕ ಚತುರತೆ ಮತ್ತು ಪ್ರಜೆಗಳ ಮೇಲಿದ್ದ ಕಾಳಜಿಯನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು. "ಶಿವಾಜಿ ಮಹಾರಾಜರು ಕೇವಲ ಶಕ್ತಿಯ ಸಂಕೇತವಲ್ಲ, ಅವರು ಶಿಸ್ತು ಮತ್ತು ನ್ಯಾಯದ ಪ್ರತೀಕ. ಅವರ ಜೀವನ ಮೌಲ್ಯಗಳನ್ನು ನಾವು ನಮ್ಮ ದೈನಂದಿನ ಕೆಲಸಗಳಲ್ಲಿ ಅಳವಡಿಸಿಕೊಳ್ಳಬೇಕು" ಎಂದು ಮುಖ್ಯಾಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ. ಮಾಜಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ವೈಭೂಪನೂ ಗೌಡ. ಉಪಾಧ್ಯಕ್ಷರಾದ ಲಕ್ಷ್ಮಿ ಆದ್ಯಪ್ಪ ನಾಯಕ್. ಕೃಷ್ಣ ನಾಯಕ್. ಮಾರ್ಕಂಡಪ್ಪ ಪಟ್ಟಣ ಪಂಚಾಯತ್ ಸದಸ್ಯರು, ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು

## ಗುಣಾತ್ಮಕ ಶಿಕ್ಷಣಕ್ಕೆ ಸೇವಾ ಮನೋಭಾವನೆ ಅತಿಮುಖ್ಯ:ಹೆಬ್ಬಾಳೆ



**ಸೈದಾಪುರ:ಫೆ.18:**ಗುಣಾತ್ಮಕ ಶಿಕ್ಷಣಕ್ಕೆ ಸೇವಾ ಮನೋಭಾವನೆ ಅತಿ ಮುಖ್ಯವಾಗಿದೆ. ಈ ದಿಸೆಯಲ್ಲಿ ಸಂಘದ ಸಹಕಾರದೊಂದಿಗೆ ಉಪನ್ಯಾಸಕರು ಕಾರ್ಯ ನಿರ್ವಹಿಸಿರುವುದರಿಂದ ಗ್ರಾಮೀಣ ಬಾಗದಲ್ಲಿ ಕಾಲೇಜು ತನ್ನದೆ ಮಹತ್ವ ಪಡೆದುಕೊಂಡಿದೆ ಎಂದು ನಿವೃತ್ತಾ ಮುಖ್ಯಗುರು ಬಿ.ಬಿ.ಹೆಬ್ಬಾಳೆ ಅಭಿಪ್ರಾಯಪಟ್ಟರು.

ಪಟ್ಟಣದ ಮಲ್ಹಾರ ಕಾರಡ್ಡಿ ಬಸವಂತ್ರಾಯ ಮತ್ತು ಸಿದ್ದಪ್ಪ ಸ್ಮಾರಕ ವಿದ್ಯಾ ವರ್ಧಕ ಪದವಿ ಪೂರ್ವ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಲಾದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ಹಳೆಯ ಹಿರಿಯ ಉಪನ್ಯಾಸಕರ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಅವರ ಮಾರ್ಗದರ್ಶನದಲ್ಲಿ ಸಾಗುವುದರ ಮೂಲಕ ಇನ್ನೂ ಹೆಚ್ಚಿನ ಸಾಧನೆ ನಿಮ್ಮದಾಗಲಿ ಎಂದು ಹಾರೈಸಿದರು. 2ನೇಪುಟಕ್ಕೆ►

## ಸಚಿವ ಎನ್.ಎಸ್.ಬೋಸರಾಜು ರವರಿಂದ ಪ್ರಗತಿ ಪರಿಶೀಲನೆ ಸಭೆ



ಧೈರ್ಯದ ದಾರಿ

**ಮಾನ್ವಿ,ಫೆ.19–** ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಕುರಿತು ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿ ತಾಲೂಕಿನ ಎಲ್ಲಾ ಗ್ರಾಮಗಳಿಗೆ ಫೆ.24 ರಿಂದ 30 ರವರೆಗೆ ಶಾಸಕರೊಂದಿಗೆ ಭೇಟಿ ನೀಡಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಪರಿಶೀಲನೆ ನಡೆಸಲಾಗುವುದು. ರಾಜ್ಯದಲ್ಲಿ 2003ರಲ್ಲಿ ಗ್ರಾಮೀಣ ಭಾಗದಲ್ಲಿನ ಜನರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ 10 ಲಕ್ಷ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭ ಮಾಡಲಾಗಿದ್ದು ಮಾನ್ವಿ ತಾಲೂಕಿನಲ್ಲಿ 228 ಹಾಗೂ ಸಿರವಾರ ತಾಲೂಕಿನಲ್ಲಿ 165 ಮಾತ್ರ ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಕೂಡಲೇ ಕುಡಿಯುವ ನೀರು ಮತ್ತು ನೈರ್ಮಾಲ್ಯ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾ,ಪಂ ,ಅಭಿವೃದ್ಧಿ ಅಧಿಕಾರಿಗಳು ಪ್ರತಿ ಗ್ರಾಮದಲ್ಲಿನ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಿತಿಗತಿಗಳ ಕುರಿತು ವರದಿ ನೀಡಬೇಕು. ತಾಲೂಕಿನ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳನ್ನು ಗುರುತಿಸಿ ಅಂತಹ ಗ್ರಾಮಗಳಿಗೆ ತಹಶಿಲ್ದಾರ್ ,ತಾ.ಪಂ. ಇ.ಓ. ಪಿ.ಡಿ.ಓ.ಗಳು ಗ್ರಾ,ಪಂ. ಆಡಳಿತಾಧಿಕಾರಿಗಳು ಸೇರಿ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಳ್ಳಬೇಕು . ಸರ್ಕಾರ ಬರಗಾಲ ಘೋಷಣೆ ಮಾಡುವವರೆಗೂ ಮುಂದಿನ 4 ತಿಂಗಳ ಕಾಲ ತಾಲೂಕಿನಲ್ಲಿ ನೀರಿನ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಗ್ರಾಮಗಳಲ್ಲಿ ಖಾಸಗಿ ಕೆರೆ ಹಾಗೂ ಕೊಳವೆಬಾವಿಗಳನ್ನು ಗುರುತಿಸಿಕೊಳ್ಳಬೇಕು. ಬೇಸಿಗೆ ಮುಗಿಯುವರೆಗೂ ಗ್ರಾ.ಪಂ..ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯಿತಿಗಳಲ್ಲಿ ಲಭ್ಯವಿದ್ದು ನೀರಿನ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು.ಜೆಸ್ಕಾಂ. ಇಲಾಖೆಯಿಂದ ಬೇಸಿಗೆಯಲ್ಲಿ ವಿದ್ಯುತ್ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಜೆಸ್ಕಾಂ.ಎ.ಇ.ಇ.ವೈದ್ಯನಾಥ ಸ್ವಾಮಿರವರಿಗೆ ಸೂಚಿಸಿದರು. ತಾಲೂಕಿನಲ್ಲಿ ಮಳೆಗಾಲದಲ್ಲಿ ಹಳ್ಳಗಳಲ್ಲಿ ಹೆಚ್ಚಿನ ನೀರು ಹರಿಯುವುದರಿಂದ ತಾತ್ಕಲಿಕ ಸೇತುವೆಗಳು ಕೊಚ್ಚಿಹೋಗುವುದರಿಂದ ಮುಸ್ಟೂರು,ದೋತರಬಂಡಿ, ಉಟಕನೂರು ಸೇತುವೆಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸುವುದಕ್ಕೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ತಾಲೂಕಿನಲ್ಲಿ ಮಂಜೂರಾಗಿರುವ 8 ಪಬ್ಲಿಕ್ ಶಾಲೆಗಳ ನಿರ್ಮಾಣಕ್ಕೆ ರಸ್ತೆ ಸಂಪರ್ಕ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಇರುವ ಕಡೆ ಜಮೀನು ಗುರುತಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ,ಡಿ ರವರಿಗೆ ಸೂಚಿಸಿದರು. 14 ಕೋಟಿ ವೆಚ್ಚದಲ್ಲಿ ಪೋತ್ನಾಳ್ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 2 ಎಕರೆ ಜಮೀನು ನೀಡಿದ್ದು ಮಾನ್ವಿ ನಗರ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ 4 ಕೋಟಿ ಅನುದಾನ ನೀಡಲಾಗಿದೆ ಶೀಘ್ರವೇ ಟೆಂಡರ್ ಪ್ರಕ್ರಿಯೇ ಪ್ರಾರಂಭಿಸಿ ಎಂದು ತಾ.ಆರೋಗ್ಯಧಿಕಾರಿ ಡಾ.ಶರಣಬಸವರವರಿಗೆ ಸೂಚಿಸಿದರು ಕೆ.ಕೆ.ಆರ್.ಡಿ.ಬಿ. ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು..

ಶಾಸಕ ಹಂಪಯ್ಯನಾಯಕ ಮಾತನಾಡಿ ತಾಲೂಕಿನಲ್ಲಿ ರಸ್ತೆ ನಿರ್ಮಾಣಕ್ಕೆ ಸರ್ಕಾರದಿಂದ ಸಾಕಷ್ಟು ಅನುದಾನ ಮಂಜೂರಾಗಿದ್ದರು ಕೂಡ ಕಾಮಗಾರಿ ಪ್ರಾರಂಭಿಸದೆ ಇರುವ ಗುತ್ತಿಗೆದಾರರಿಗೆ ನೋಟಿಸ್ ನೀಡಿ, ತಾಲೂಕಿನ ಮುಸ್ಟೂರು ಗ್ರಾಮದ ರಂಗದಾಳ್ ಮುಸ್ಟೂರು ಹಳ್ಳಕ್ಕೆ ನೂತನ ಸೇತುವೆ ನಿರ್ಮಾಣವಾಗುವವರೆಗೂ ಈಗಿರುವ ತಾತ್ಕಲಿಕ ಸೇತುವೆಯ ಒಂದು ಭಾಗ ಕುಸಿದಿದ್ದು ಮಳೆಗಾಲದಲ್ಲಿ ಸಂಪೂರ್ಣವಾಗಿ ಕೊಚ್ಚಿ ಹೊಗದಂತೆ ದುರಸ್ಥಿ ಕೈಗೊಳ್ಳುವಂತೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜಿ.ಪಂ. ಉಪಕಾರ್ಯದರ್ಶಿ ಹಾಗೂ ,ಮಾನ್ವಿ ತಾಲೂಕು ಪಂಚಾಯಿತಿ ಆಢಳಿತಾಧಿಕಾರಿ ಹಾಲಸಿದ್ದಪ್ಪ 2ನೇಪುಟಕ್ಕೆ►

## ಮೊದಲನೇ ಪುಟದಿಂದ

# ಮಾನ್ವಿ ಎನ್ಪಿಎಸ್ ನೌಕರರ ಸಂಘದ ಪದಾಧಿಕಾರಿಗಳ ಆಯ್ಕೆ: 'ತಾಲೂಕ ಅಧ್ಯಕ್ಷರಾಗಿ ಸುರೇಶ ಕುಮಾರ ಪುನರ್ ಅಯ್ಕೆ'

ಸಂಘಟನಾ ಕಾರ್ಯದರ್ಶಿ ಸುಗುರೇಶ್ ಪಾಟೀಲ್ ಜಿಪಿಟಿ ಶಿಕ್ಷಣ ಇಲಾಖೆ ಹಾಗೂ ಬಾಳಪ್ಪ ಆರೋಗ್ಯ ಇಲಾಖೆ ಹಾಗೂ ಶಿವಗೇನಿ ನಾಯಕ ಜೆಸ್ಕಾಂ, ಹಾಗೂ ವೆಂಕಟೇಶ್ ಯಾದವ್ ನೀರಾವರಿ ಇಲಾಖೆ, ಸಹ ಕಾರ್ಯದರ್ಶಿಯಾಗಿ ವಿಜಯಕುಮಾರ್ ಕುರುಡಿ ಪ್ರಾಥಮಿಕ ಶಿಕ್ಷಣ ಇಲಾಖೆ ಹಾಗೂ ಶರಣಬಸವ ಉರಿಣ ಶಿಕ್ಷಣ ಇಲಾಖೆ, ಸಲಾವುದ್ದಿನ್ ಬಾಬರ್

ಆಂತರಿಕ ಲೆಕ್ಕ ಪರಿಶೋಧಕರು

ಕಂದಾಯ ಇಲಾಖೆ, ಸೈಯದ್ ಸಂದಾನಿ ಸಿದ್ದಿಕಿ ವಕೀಲರು ಕಾನೂನು ಸಲಹೆಗಾರ,

ಸಂಘಟನಾ ಗೌರವ ಸಲಹೆಗಾರರಾಗಿ ಮಲ್ಲಿಕಾರ್ಜುನ ಕೋನಾಪುರಪೇಟೆ

ಪ್ರಾಥಮಿಕ ಶಿಕ್ಷಣ ಇಲಾಖೆ, ಹಾಗೂ ಬಸನಗೌಡ ಪೊಲೀಸ್ ಪಾಟೀಲ್*

ಅನುದಾನಿತ ಶಾಲಾ ಶಿಕ್ಷಣ ಹಾಗೂ ಮಲ್ಲಿಕಾರ್ಜುನ ಗೌಡ

ಭೂಮಾಪನ ಇಲಾಖೆ ಅವರನ್ನು ಆಯ್ಕೆ ಮಾಡಲಾಯಿತು. ನಂತರ ಸಂಘದ ವತಿಯಿಂದ ನೂತನ ಪದಾಧಿಕಾರಿಗಳು ಸನ್ಮಾನಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕ ಸರ್ಕಾರಿ ಎನ್ಪಿಎಸ್ ನೌಕರರ ಸಂಘದ ಪದಾಧಿಕಾರಿಗಳು ಸರ್ವ ಸದಸ್ಯರು ಉಪಸ್ಥಿತರಿದ್ದರು.

# ಸಚಿವ ಎನ್.ಎಸ್.ಬೋಸರಾಜು ರವರಿಂದ ಪ್ರಗತಿ ಪರಿಶೀಲನೆ ಸಭೆ

ಕುರುಬರ ಮಾತನಾಡಿ ಮಾನ್ವಿ ಮತ್ತು ಸಿರವಾರ ತಾಲೂಕುಗಳ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಆಢಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು ತಮ್ಮ ವ್ಯಾಪ್ತಿಯಲ್ಲಿನ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಜಿಲ್ಲಾಧಿಕಾರಿಗಳಿಗೆ ವರದಿ ನೀಡಬೇಕು. ಎಸ್.ಎಸ್.ಎಲ್.ಸಿ.ವಾರ್ಷಿಕ ಪರೀಕ್ಷೆಯಲ್ಲಿ ಕಳೆದ ಬಾರಿ ಅತ್ಯಂತ ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳಿಗೆ ಹಾಗೂ ವಸತಿ ಶಾಲೆಗಳಿಗೆ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಳ್ಳಬೇಕು.ಬೇಸಿಗೆಯಲ್ಲಿ ನೀರಿನ ಮೂಲಗಳಿಂದ ಹೆಚ್ಚಾಗಿ ಸಾಂಕ್ರಮಿಕ ಕಾಯಿಲೆಗಳು ಹರಡುವುದರಿಂದ ನೀರಿನ ಸ್ವಚ್ಚತೆ ಕುರಿತು ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು.ಎಂದು ತಿಳಿಸಿದರು.
ಸಭೆಯಲ್ಲಿ ಮಾನ್ವಿ ತಹಸೀಲ್ದಾರ್ ಭೀವರಾಯ ಬಿ,ರಾಮಸಮುದ್ರ, ಸಿರವಾರ ತಹಸೀಲ್ದಾರ್ ಆಶೋಕ ಪವಾರ್, ಮಾನ್ವಿ ತಾ.ಪಂ. ಇ.ಓ.ಖಾಲಿದ್ ಅಹ್ಮದ್,ಸಿರವಾರ ತಾ.ಪಂ.ಇ.ಓ. ಶಶೀಧರ ಸ್ವಾಮಿ,ಪಿ.ಐ,ಸೋಮಶೇಖರ ಎಸ್.ಕೆಂಚರೆಡ್ಡಿ ಸೇರಿದಂತೆ ಮಾನ್ವಿ ಮತ್ತು ಸಿರವಾರ ತಾಲೂಕುಗಳ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿಗಳು, ಪಿ.ಡಿ.ಓಗಳು, ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದರು.

## ಗುಣಾತ್ಮಕ ಶಿಕ್ಷಣಕ್ಕೆ ಸೇವಾ ಮನೋಭಾವನೆ ಅತಿಮುಖ್ಯ:ಹೆಬ್ಬಾಳೆ

ಈ ಸಂದರ್ಭದಲ್ಲಿ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ಹಳೆ ಉಪನ್ಯಾಸಕರಾದ ಪ್ರಕಾಶ ಕುಲ್ಕರ್ಣಿ, ಚಂದ್ರಯ್ಯ ಬಾಡಿಯಲ, ಹಂಪಣ್ಣ ಸಜ್ಜನಶೆಟ್ಟಿ, ಲಿಂಗಾರೆಡ್ಡಿ ನಾಯಕ, ಗೂಳಪ್ಪ.ಎಸ್.ಮಲ್ಹಾರ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾ ವರ್ಧಕ ಸಂಸ್ಥೆಯ ಉಪಾಧ್ಯಕ್ಷ ಹಾಗೂ ಗುರುಮಠಲ್ ತಾಲೂಕಾ ಪಂಚ ಗ್ಯಾರೆಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಲಕ್ಷ್ಮೀಕಾಂತರಡ್ಡಿ ಪಲ್ಲಾ, ಸಹ ಕಾರ್ಯದರ್ಶಿ ಕೆ.ಬಿ.ಗೋವರ್ಧನ, ಆಡಳಿತ ಮಂಡಳಿಯ ಸದಸ್ಯರಾದ ಬೂದೆಪ್ಪಗೌಡ ಭೀಮನಳ್ಳಿ, ಸಂಗಾರಡ್ಡಿಗೌಡ ಮಲ್ಹಾರ, ಪ್ರಭುಲಿಂಗ ವಾರದ, ಸಿದ್ರಾಮಪ್ಪಗೌಡ ಗೊಂದಡಗಿ, ಸುರೇಶ ಆನಂಪಲ್ಲಿ, ಚನ್ನಾರೆಡ್ಡಿ ಹುಣಸೇಮರ, ಪ್ರಾಂಶುಪಾಲ ಜಿ.ಎಂ.ಗುರುಪ್ರಸಾದ, ಕರಬಸಯ್ಯ ದಂಡಿಗಿಮಠ, ಪ್ರಕಾಶರೆಡ್ಡಿ, ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಸೇರಿದಂತೆ ಇತರರಿದ್ದರು.

# ರಾಜ್ಯದಲ್ಲಿ ಒಪಿಎಸ್ ಜಾರಿಗೆ ಯತ್ನ: ಷಡಾಕ್ಷರಿ



**ಜೇವರ್ಗಿ:ಫೆ.19:** 'ಎನ್‌ಪಿಎಸ್ ರದ್ದುಪಡಿಸಿ ಒಪಿಎಸ್ ಜಾರಿ ಮಾಡುತ್ತೇವೆ. ಇದಕ್ಕಾಗಿ ಎಲ್ಲರೂ ಸೇರಿ ಹೋರಾಟ ಮಾಡೋಣ' ಎಂದು ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ನೌಕರರಲ್ಲಿ ಮನವಿ ಮಾಡಿದರು.

ಪಟ್ಟಣದ ಧರ್ಮಸಿಂಗ್ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಾಲ್ಲೂಕು ಘಟಕದ ವತಿಯಿಂದ ಬುಧವಾರ ಆಯೋಜಿಸಲಾಗಿದ್ದ ತಾಲ್ಲೂಕು ಮಟ್ಟದ ಉತ್ತಮ ಸೇವಾ ರತ್ನ ಪ್ರಶಸ್ತಿ ಪ್ರದಾನ, ತಾಲ್ಲೂಕು ವಾರ್ಷಿಕ ಮಹಾಸಭೆ, ಸರ್ಕಾರಿ ನೌಕರರ ಸೇವಾ ನಿಯಮಗಳ ಕಾರ್ಯಾಗಾರ ಕಾರ್ಯ-ಕ್ರಮದಲ್ಲಿ ಅವರು ಮಾತನಾಡಿದರು.

'ಸರ್ಕಾರ ಆದಷ್ಟು ಬೇಗನೆ ವರದಿಯನ್ನು ತೆಗೆದುಕೊಂಡು ಅಧ್ಯಯನ ಮಾಡಿ ಮುಂಬರುವ ಬಜೆಟ್‌ನಲ್ಲಿ ಎಸ್‌ಪಿಎಸ್ ರದ್ದುಪಡಿಸಿ ಒಪಿಎಸ್ ಜಾರಿ ಮಾಡಬೇಕು.

ಪಟ್ಟಣದ ಧರ್ಮಸಿಂಗ್ ಕಲ್ಯಾಣ ಮಂಟಪದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ನಡೆದ ಉತ್ತಮ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ಉದ್ಘಾಟಿಸಿದರು

ಈಗಾಗಲೇ ಕೇಂದ್ರ ಮಾದರಿಯ ವೇತನ ಪಡೆಯುತ್ತಿದ್ದಾರೆ. ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ನೌಕರರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಬೇಡಿಕೆಗಳನ್ನು ಈಡೆರಿಸುವ ಪ್ರಯತ್ನ ಮಾಡಲಾಗುತ್ತಿದೆ' ಎಂದರು.

'ರಾಜ್ಯದಲ್ಲಿ 6.5 ಲಕ್ಷಕ್ಕೂ ಮೇಲ್ಪಟ್ಟು ಸರ್ಕಾರಿ ನೌಕರರು ಇದ್ದು ಪ್ರಾಮಾಣಿಕತೆಯಿಂದ ಕೆಲಸ ಮಾಡಿ. ಕೆಜಿಡಿ ಆನ್‌ಲೈನ್, ಸರಿಯಾದ ಸಮಯಕ್ಕೆ ವೇತನ, ಡಿಎ ಹೆಚ್ಚಳ, ಆರೋಗ್ಯ ಯೋಜನೆ, ಮಹಿಳಾ ನೌಕರಸ್ಥರಿಗೆ ಋತುಚಕ್ರ ರಜೆ, ಕ್ಯಾನ್ಸರ್, ಕಿಡ್ನಿ ಪೀಡಿತ ನೌಕರರಿಗೆ

6 ತಿಂಗಳು ರಜೆ ಸೇರಿ ಮುಂತಾದ ಬೇಡಿಕೆಗಳನ್ನು ಈಡೇರಿಸಲಾಗು ತಿದೆ' ಎಂದು ತಿಳಿಸಿದರು. ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನೌಕರದ ಸಂಘದ ತಾಲ್ಲೂಕು ಅಧ್ಯಕ್ಷ ದಾನಪ್ಪಗೌಡ ಹಳಿಮನಿ ಅಧ್ಯಕ್ಷತೆ ವಹಿಸಿದ್ದರು. ಸೊನ್ನ ದಾಸೋಹ ಮಠದ ಪೀಠಾಧಿಪತಿ ಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಎಂಎಸಿ ಶಶೀಲ್ ನಮೋಶಿ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ನೌಕರರ ಸಂಘದ


ಹಲವಾರು ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳಿಗೆ ಅದರಲ್ಲೂ ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯ ಅನುಮತಿ ಬೇಕಿಲ್ಲ. ಹೀಗಾಗಿ ಹುದ್ದೆಗಳ ನೇಮಕಾತಿ ಹಾಗೂ ಒಪಿಎಸ್ ಜಾರಿಗೆ ಸದನದಲ್ಲಿ ಹೋರಾಟ ಮಾಡಲಾಗುವುದು ಶಶೀಲ್ ನಮೋಶಿ, ಎಂಎಸಿ

ಜಿಲ್ಲಾಧ್ಯಕ್ಷ ಬಸವರಾಜ ಬಳ್ಳುಂಡಗಿ, ರಾಜಶೇಖರ ಸಾಹು ಸೀರಿ, ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಿರಿಗೌಡರ, ತಹಶೀಲ್ದಾರ್ ಮಲ್ಲಣ್ಣ ಯಲಗೋಡ, ತಾ.ಪಂ ಇಒ ರವಿಚಂ-ದ್ರರೆಡ್ಡಿ, ಪುರಸಭೆ ಮುಖ್ಯಾಧಿಕಾರಿ ಶಂಭುಲಿಂಗ ದೇಸಾಯಿ ಡಿ ಬಿ ಪಾಟೀಲ್ ಗುಡುಲಾಲ್ ಶೇಖ ಸೇರಿದಂತೆ ಹಲವಾರು ಸರ್ಕಾರಿ ನೌಕರರು ಭಾಗವಹಿಸಿದ್ದರು. ಸಂಘದ ಅಧ್ಯಕ್ಷ ದಾನಪ್ಪಗೌಡ ಹಳಿಮನಿ ಸ್ವಾಗತಿಸಿದರು. ಶಿಕ್ಷಕ ಶಿವಾನಂದ ದಾನಮ್ಮಗುಡಿ ನಿರೂಪಿಸಿದರು. ಶಿಕ್ಷಕ ಶಂಬಣ್ಣ ಹೂಗಾರ ವಂದಿಸಿದರು.

**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ 6360866626**

**ನಮ್ಮ ಮೇಲಿದ್ದವರನ್ನು ನೋಡಿದರೆ ಅಸಮಾಧಾನ, ಕೆಳಗಿದ್ದವರನ್ನು ನೋಡಿದರೆ ಸಮಾಧಾನ.**

# ಹೋಲಿಕೆ, ಆಸೆ ಮತ್ತು ನೆಮ್ಮದಿ



ನಮ್ಮ ಜೀವನದಲ್ಲಿ ಬೆಳೆಯಬೇಕೆಂದರೆ, ನಮಗಿಂತ ಮುಂದೆ ಹೋಗಿರುವವರನ್ನು ನೋಡುವುದು ಸಹಜ. ಅವರೊಂದಿಗೆ ನಮ್ಮನ್ನು ಹೋಲಿಸಿಕೊಂಡಾಗ ನಾನೂ ಇನ್ನಷ್ಟು ಸಾಧಿಸಬೇಕು ಎಂಬ ಪ್ರೇರಣೆ ಹುಟ್ಟುತ್ತದೆ. ಆದರೆ ಅದೇ ಹೋಲಿಕೆ ಮಿತಿಮೀರಿದಾಗ, ಅದು ನಮ್ಮ ನೆಮ್ಮದಿಯನ್ನು ನಿಧಾನವಾಗಿ ಕಸಿದುಕೊಳ್ಳುತ್ತದೆ.

ಬುದ್ಧನು ಹೇಳಿದಂತೆ "ಆಸೆಯೇ ದುಃಖಕ್ಕೆ ಮೂಲ ಕಾರಣ." ಆಸೆ ಇಲ್ಲದೆ ಬೆಳವಣಿಗೆ ಸಾಧ್ಯವಿಲ್ಲ, ಆದರೆ ತೃಪ್ತಿಯಿಲ್ಲದ ಆಸೆ ಬದುಕನ್ನು ಅಶಾಂತಗೊಳಿಸುತ್ತದೆ.

ಬೋರ್ಡ್ ಮೇಲೆ ಒಂದು ಗೆರೆ ಎಳೆದರೆ ಅದು ಚಿಕ್ಕದೋ ದೊಡ್ಡದೋ ಎಂದು ಹೇಳಲು ಸಾಧ್ಯವಿಲ್ಲ. ಅದರ ಪಕ್ಕದಲ್ಲಿ ಮತ್ತೊಂದು ಗೆರೆ ಇದ್ದಾಗಲೇ ವ್ಯತ್ಯಾಸ ಗೊತ್ತಾಗುತ್ತದೆ. ಅದೇ ರೀತಿ, ಇತರರೊಂದಿಗೆ ನಮ್ಮನ್ನು ಹೋಲಿಸಿಕೊಂಡಾಗ ನಾವು ಎಲ್ಲಿದ್ದೇವೆ ಎಂಬ ಅರಿವು ಬರುತ್ತದೆ. ಆದರೆ ಆ ಅರಿವಿನ ಬೆಲೆಯಲ್ಲಿ, ಕೆಲವೊಮ್ಮೆ ಈ ಕ್ಷಣದ ಸಂತೋಷವನ್ನೇ ಕಳೆದುಕೊಳ್ಳುತ್ತೇವೆ.

ವ್ಯಕ್ತಿ ಎಷ್ಟೇ ಬೆಳೆದರೂ ಹಣ, ಆಸ್ತಿ, ಸಂಪತ್ತು, ಜ್ಞಾನ ಅಥವಾ ಸ್ಥಾನಮಾನ ಯಾವುದೇ ಆಗಿರಲಿ "ಇದು ಸಾಕು" ಎಂಬ ಭಾವ ಕಡಿಮೆಗೇ ಬರುತ್ತದೆ. ಇನ್ನಷ್ಟು ಬೇಕು ಎಂಬ ಆಸೆ ಮತ್ತೆ ಹುಟ್ಟುತ್ತದೆ. ಮೇಲಿರುವವರನ್ನು ನೋಡಿದರೆ ಅಸಮಾಧಾನ, ಕೆಳಗಿರುವವರನ್ನು ನೋಡಿದರೆ ಸಮಾಧಾನ.

ಆದರೆ ಎಲ್ಲದಕ್ಕೂ ಮೀರಿದ ದೊಡ್ಡ ಸಂಪತ್ತು ಒಂದೇ ಆರೋಗ್ಯ. ಮತ್ತು ಇನ್ನೊಂದು ಅಮೂಲ್ಯವಾದ ಸಂಗತಿ ಈ ಕ್ಷಣ ನನ್ನದು ಎಂದು ಬದುಕುವ ಮನಸ್ಥಿತಿ.

ಹೋಲಿಕೆ ಮಾಡಿ ನಾವು ಸಾಧಿಸಬಹುದು.
ಅದೇ ಹೋಲಿಕೆ ಮಾಡಿ ನಾವು ನಮ್ಮ ನೆಮ್ಮದಿಯನ್ನು ಕಳೆದುಕೊಳ್ಳಬಹುದು.

ಏನು ಆಯ್ಕೆ ಮಾಡಬೇಕು ಅನ್ನೋದು ನಮ್ಮ ಕೈಯಲ್ಲೇ ಇದೆ.

**-ಮಹಿಬೂಬ್ ಮದ್ಲಾಪುರ ಸಂಪನ್ಮೂಲ ವ್ಯಕ್ತಿ ಮಾನವಿ.**



# ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ



ಧೈರ್ಯದ ದಾರಿ

**ಮಾನಿ,ಫೆ.19-:** ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತದಿಂದ ನಡೆದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮ ಅಂಗವಾಗಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿ ಶಿವಾಜಿ ಮಹಾರಾಜರು ತಾಯಿ ಜಿಜಾಬಾಯಿಯಿಂದ ಪ್ರೇರಣೆ ಹೊಂದಿ ಮಹಾನ್ ದೇಶಭಕ್ತರಾಗಿ ಬಾಲ್ಯದಿಂದಲ್ಲೇ ಬೆಳೆದರು ಮಹಾನ್ ಯೋಧರಾಗಿದ್ದ ಅವರು, ಯುದ್ದ ನೈಪುಣ್ಯವನ್ನು ಹೊಂದಿ ಮರಾಠಾ ಸಾಮ್ರಾಜ್ಯವನ್ನು ಸ್ಥಾಪಿಸಿದರು ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜೀವನ ಹಾಗೂ ಸಾಧನೆಗಳು ಯುವಕರಿಗೆ ಸ್ಫೂರ್ತಿಯಾಗಿದೆ ಎಂದು ತಿಳಿಸಿದರು.
ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್, ಉಪತಹಶೀಲ್ದಾರ್ ವಿರುಪಣ್ಣ, ವಿನಾಯಕ ರಾವ್ , ಛತ್ರಪತಿ ಶಿವಾಜಿ ಯುವಸೇನೆಯ ಸಂಸ್ಥಪಕ ರಾಜ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಸ್ವಾಮಿ, ಗಿರಿ ತಡಕಲ್, ಬಸವರಾಜ ಸಾಹುಕರ್, ಮಹಾಂತೇಶ ಗೌಡ ಅಲ್ದಾಳ್, ಅಹೇಶ,ಗೌರಿಶ, ಮುರುಗೇಶ ಸೇರಿದಂತೆ, ಕಂದಾಯ ಇಲಾಖೆಯ ಸಿಬ್ಬಂದಿಗಳು ಇದ್ದರು.

# ನೀರಮಾನ್ವಿ ಶಿವಾಜಿ ಜಯಂತೋತ್ಸವ ಆಚರಣೆ



**ಮಾನ್ವಿ,ಫೆ.19-**ಛತ್ರಪತಿ ಶಿವಾಜಿ ಯುವ ಸೇನೆ ನೀರಮಾನ್ವಿ ಹಾಗೂ ಗ್ರಾಮದ ಹಿರಿಯರ ಸಂಯುಕ್ತಾಶ್ರಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396 ನೆಯ ಜಯಂತೋತ್ಸವವನ್ನು ಅತಿ ವಿಜ್ರಂಭಣೆಯಿಂದ ಸರಳವಾಗಿ ಶ್ರೀ ರೇಣುಕಾ ಯಲ್ಲಮ್ಮ ದೇವಿ ಸರ್ಕಲ್ ನಲ್ಲಿ ಊರಿನ ಹಿರಿಯರು ಹಾಗೂ ಗ್ರಾಮ ಘಟಕದ ಅಧ್ಯಕ್ಷ ರವಿ ತಿಮ್ಮಯ್ಯ ನಾಯಕ ಹಾಗೂ ಪದಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ಈ ಸಂದರ್ಭದಲ್ಲಿ ಗ್ರಾಮದ ಎಲ್ಲಾ ಮುಖಂಡರು ಹಾಜರಿದ್ದು ಶಿವಾಜಿ ಮಹಾರಾಜರ ಆದರ್ಶಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಎಲ್ಲರ ಜೊತೆ ಉತ್ತಮವಾಗಿ ಸಹಬಾಳ್ವೆಯಿಂದ ಇರಬಹುದಾಗಿದೆ ಕಾರಣ ಜಾತಿ ಭೇದವಿಲ್ಲದೆ ಎಲ್ಲರೂ ಒಗ್ಗಟ್ಟಾಗಿರಬೇಕೆಂದರು ಈ ಸಂದರ್ಭದಲ್ಲಿ ಕೇಂದ್ರೀಯ ಶಶಸ್ತ್ರ ಪಡೆಗೆ ಃಖಈ ಗೆ ಆಯ್ಕೆಯಾಗಿರುವ ಜೆಲ್ಲಿ ಶಿವರಾಜ ನಾಗಪ್ಪ ನಾಯಕ ನೀರಮಾನ್ವಿ ಇವರನ್ನು ಈ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ಯುವ ಸೇನೆ ಬಳಗದಿಂದ ಸನ್ಮಾನಿಸಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಎಲ್ಲಾ ಸಮುದಾಯದ ಬಂಧುಗಳು ಪಕ್ಕದ ಗ್ರಾಮಗಳಾದ ಹರವಿ ಬೆಟ್ಟದೂರು ಕಪಗಲ್ ಸುಂಕೇಶ್ವರದ ಸಾದಪುರದ ಯುವಕರು ಹಾಜರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು ನಂತರ ಜಯಂತೋತ್ಸವದ ಅಂಗವಾಗಿ ಬಂದಂತ ಎಲ್ಲಾ ದೇಶಭಕ್ತರಿಗೆ ಸಿಹಿ ಹಂಚಲಾಯಿತು

## ಜಿಲ್ಲಾ ಎಸ್.ಸಿ. ಪ್ರದಾನ ಕಾರ್ಯದರ್ಶಿಯಾಗಿ ಸೀತಾರಾಮ ನಾಯ್ಕ್ ಆಯ್ಕೆ

ಧೈರ್ಯದ ದಾರಿ

**ಅರಕೇರಾ,ಫೆ.19-** ರಾಜ್ಯಾದ್ಯಾಂತ ಸಂಘಟನಾ ಪರ್ವದ ಭಾಗವಾಗಿ ರಾಯಚೂರು ಜಿಲ್ಲೆಯ ಭಾರತೀಯ ಜನತಾ ಪಕ್ಷದ ವಿವಿಧ ಮೋರ್ಚಾಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ನಿಯುಕ್ತಿ ಮಾಡಲಾಗಿದೆ. ಎಂದು ಜಿಲ್ಲಾ ಅಧ್ಯಕ್ಷರು ವೀರನಗೌಡ ಬಿ. ಪಾಟೀಲ್ ಲೆಕ್ಕಿಹಾಳ ತಿಳಿಸಿದ್ದಾರೆ.

ಸೀತಾರಾಮ ನಾಯ್ಕ್ ಬಿ.ಗಣೇಕಲ್ ಅವರನ್ನು ಜಿಲ್ಲಾ ಎಸ್.ಸಿ. ಪ್ರದಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದು ಬಿ.ಜೆ.ಪಿ.ಯ ಮುಖಂಡರು ಹರ್ಷ ವ್ಯಕ್ತಪಡಿಸಿದರು ಮತ್ತು ಅಭಿನಂದನೆಗಳನ್ನು ತಿಳಿಸಿದ್ದಾರೆ.



# ಇಮಾಮಬಾದ್ ಬಾಲಕ ಸಾವಿಗೆ ಸಾಂತ್ವನ ನಿರ್ಲಕ್ಷ್ಯಕ್ಕೆ ಕ್ರಮ ಕೈಗೊಳ್ಳಲು ಈಶ್ವರಸಿಂಗ ಆಗ್ರಹ



**ಬೀದರ್: ಫೆ.19:**ಬೀದರ್ ತಾಲೂಕಿನ ಇಮಾಮಬಾದ್ ಗ್ರಾಮದ ಐದು ವರ್ಷದ ಬಾಲಕ ಅವಿನಾಶ್ (ತಂದೆ ರಾಜಕುಮಾರ್) ಇತ್ತೀಚೆಗೆ ಮಲಿಕ್ ಮರ್ಜಾಪುರ್ ಗ್ರಾಮದ ಸುತ್ತಮುತ್ತ ಇರುವ ಪುರಾತತ್ವ ಇಲಾಖೆಗೆ ಸೇರಿದ ಕಂದನಲ್ಲಿ ಬಿದ್ದು ಮೃತಪಟ್ಟ ದುರ್ಘಟನೆಗೆ ಸಂಬಂಧಿಸಿದಂತೆ ಬಿಜೆಪಿ ಮುಖಂಡ ಈಶ್ವರಸಿಂಗ ಠಾಕೂರ ಅವರು ಇಂದು ಮೃತ ಬಾಲಕನ ನಿವಾಸಕ್ಕೆ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು ಮತ್ತು ಧೈರ್ಯ ತುಂಬಿದರು.

ಘಟನೆಯ ವಿವರ ನೀಡಿದ ಅವರು, ಅವಿನಾಶ್ ತನ್ನ ಸಂಬಂಧಿಕರೊಂದಿಗೆ ಮಲಿಕ್ ಮರ್ಜಾಪುರ್ ಗ್ರಾಮಕ್ಕೆ ತೆರಳಿದ್ದ ವೇಳೆ ಊರಿನ ಸುತ್ತಮುತ್ತ ಇರುವ ಪುರಾತತ್ವ ಇಲಾಖೆಯ ಕಂದಕ್ ಬಳಿ ಯಾವುದೇ ರೀತಿಯ ಎಚ್ಚರಿಕೆ ಫಲಕ, ರಕ್ಷಣಾ ಗೋಡೆ ಅಥವಾ ಬೇಲಿ ಇಲ್ಲದ ಕಾರಣ ನಡೆದುಕೊಂಡು ಹೋಗುವಾಗ ಅಜಾಗರೂಕತೆಯಿಂದ ಕಂದಗೆ ಬಿದ್ದು ದಾರುಣವಾಗಿ ಪ್ರಾಣ ಕಳೆದುಕೊಂಡಿದ್ದಾನೆ ಎಂದು ಹೇಳಿದರು. ಈ ಘಟನೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಂಭವಿಸಿರುವುದು ಅತ್ಯಂತ ದುಃಖದ ಸಂಗತಿ ಹಾಗೂ ದೂರದೃಷ್ಟಿಯ ಕೊರತೆಯಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಇದೇ ಕಂದನಲ್ಲಿ ಈ ಹಿಂದೆ ಸಹ ಕೆಲವು ಮಂದಿ ಮತ್ತು ಜಾನುವಾರುಗಳು ಪ್ರಾಣ ಕಳೆದುಕೊಂಡಿರುವ ಘಟನೆಗಳು ನಡೆದಿದ್ದರೂ ಸಂಬಂಧಪಟ್ಟ ಇಲಾಖೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿರುವುದು ಅತ್ಯಂತ ಖೇದಕರ ಸಂಗತಿಯಾಗಿದೆ ಎಂದು ಅವರು ತಿಳಿಸಿದರು. ಇಂತಹ ದುರಂತಗಳು ಮರುಕಳಿಸದಂತೆ ತಕ್ಷಣವೇ ರಕ್ಷಣಾ ಗೋಡೆ, ಬೇಲಿ ಮತ್ತು ಎಚ್ಚರಿಕೆ ಫಲಕಗಳನ್ನು ಅಳವಡಿಸಬೇಕೆಂದು ಆಗ್ರಹಿಸಿದರು.

ಮಗುವನ್ನು ಕಳೆದುಕೊಂಡ ತಂದೆ-ತಾಯಿಗಳ ಆಕ್ರಂದನ ಇನ್ನೂ ತಣಿಯದೆ ಇರುವುದನ್ನು ನೋಡಿ ಮನಸ್ಸಿಗೆ ನೋವಾಗಿದೆ ಎಂದು ಹೇಳಿದ ಅವರು, ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಹಾಗೂ ನ್ಯಾಯ ದೊರಕಿಸಬೇಕೆಂದು ಒತ್ತಾಯಿಸಿದರು. ಈ ಸಂಬಂಧ ಅವರು ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಶ್ರೀ ದೀಪಕ ಗಾದಗಿ, ರಾಜೇಂದ್ರ ಪೂಜಾರಿ, ರಾಜೀವ್ ಗಾದಗಿ, ಪ್ರಕಾಶ್ ರೆಡ್ಡಿ ರಾಯಕೋಡೆ, ವೆಂಕಟರೆಡ್ಡಿ ಪಾಟೀಲ, ಮಲ್ಲಿಕಾರ್ಜುನ ಟೆಕಮಾಳ, ಶಂಕರರಾವ ಅಬೆಂದಿ, ಪ್ರಭಣ್ಣಾ ರಾಮತೀರ್ಥ, ನಾಗಗೊಂಡ ಮೇತ್ರೆ, ಸಂಜು ಮೇತ್ರೆ, ಸಿದ್ದು ಶಾಪುರೇ, ಸುನೀಲ ಶಾಪುರೇ ಹಾಗೂ ರಮೇಶ್ ಅಬ್ಬೆದ್ದಿ ಹಾಗೂ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

# ಆರ್ ಎಸ್ ಎಸ್ ಕುರಿತು ಖರ್ಗೆ ಹೇಳಿಕೆ ಖಂಡನೆ : ಮುದ್ನಾಳ ತಿರುಗೇಟು

**ಯಾದಗಿರಿ: ಫೆ.18:**ಆರ್ ಎಸ್ ಎಸ್ ಬಗ್ಗೆ ಸಚಿವರ ಹೇಳಿಕೆ ರಾಜಕೀಯವಾಗಿ ಪ್ರೇರಿತವಾಗಿದ್ದು, ಹುದ್ದೆಯ ಗೌರವಕ್ಕೆ ಧಕ್ಕೆಯುಂಟು ಮಾಡುವಂತಿದೆ ಎಂದು ಯಾದಗಿರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮುಖಂಡ ಮಹೇಶರಡ್ಡಿ ಮುದ್ನಾಳ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಇನ್ನೂ



ಪತ್ರಿಕಾ ಪ್ರಕಟಣೆ ಮೂಲಕ ಪ್ರತಿಕ್ರಿಯಿಸಿದ ಅವರು, ಕಲ್ಬುರ್ಗಿ ಉಸ್ತುವಾರಿ ಸಚಿವರು ಹಾಗೂ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರಾದ ಪ್ರಿಯಾಂಕ ಖರ್ಗೆ ಅವರು ಆರ್ ಎಸ್ ಎಸ್ ಅನ್ನು ದೆವ್ವಕ್ಕೆ ಹೋಲಿಕೆ ಮಾಡಿರುವುದು ಅತ್ಯಂತ ದುರದೃಷ್ಟಕರ ಎಂದರು. ವಿಶ್ವದ ಅತಿ ದೊಡ್ಡ ಸ್ವಯಂಸೇವಕ ಸಂಘಟನೆಗಳಲ್ಲಿ ಒಂದಾದ ರಾಷ್ಟ್ರೀಯ ಸ್ವಯಂಸೇವಕ ಸಂಘ ಬಗ್ಗೆ ಈ ರೀತಿಯ ಅವಹೇಳನಕಾರಿ ಹೇಳಿಕೆ ನೀಡುವುದು ಸರಿಯಲ್ಲ ಎಂದು ಹೇಳಿದರು.ಹಾಗೆಯೇ ಭಾರತೀಯ ಜನತಾ ಪಕ್ಷ ಹಾಗೂ ಅದರ ಸಿದ್ಧಾಂತಗಳ ವಿರುದ್ಧ ನಿರಂತರ ಟೀಕೆ ಮಾಡುವ ಮೂಲಕ ಸಚಿವರು ರಾಜಕೀಯ ಪ್ರಚಾರಕ್ಕೇ ಹೆಚ್ಚು ಮಹತ್ವ ನೀಡುತ್ತಿದ್ದಾರೆ ಎಂದು ಆರೋಪಿಸಿದರು.ಚಿಟ್ಟಾಪುರ ಕ್ಷೇತ್ರದ ಜನಪ್ರತಿನಿಧಿಯಾಗಿರುವ ಖರ್ಗೆ ಅವರು ತಮ್ಮ ಕ್ಷೇತ್ರದ ಅಭಿವೃದ್ಧಿಯ ಕಡೆ ಗಮನ ಹರಿಸುವುದು ಮುಖ್ಯ. ಕುಡಿಯುವ ನೀರಿನ ಸಮಸ್ಯೆ, ರಸ್ತೆ ಮೂಲಸೌಕರ್ಯಗಳ ಕೊರತೆ, ಕೈಗಾರಿಕಾ ಅಭಿವೃದ್ಧಿಯ ಅಭಾವ, ಯುವಕರಿಗೆ ಉದ್ಯೋಗಾವಕಾಶಗಳ ಕೊರತೆ ಮುಂತಾದ ಅನೇಕ ಸಮಸ್ಯೆಗಳು ಇಂದಿಗೂ ಮುಂದುವರಿದಿವೆ ಎಂದು ಟೀಕಿಸಿದರು.ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ಮೆಚ್ಚಿದ್ದ ಸಂಘದ ದೇಶಭಕ್ತಿ ಪರಂಪರೆಯನ್ನು ಹೀಯಾಳಿಸುವುದು ಸಮಾಜದಲ್ಲಿ ಅನಾವಶ್ಯಕ ಭಿನ್ನಾಭಿಪ್ರಾಯ ಸೃಷ್ಟಿಸುವಂತಾಗಿದೆ ಎಂದು ಮುದ್ನಾಳ ಅಭಿಪ್ರಾಯಪಟ್ಟರು.

ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ಕೈಗಾರಿಕೆಗಳು, ಐಟಿ-ಬಿಟಿ ಸಂಸ್ಥೆಗಳು, ಮೂಲಸೌಕರ್ಯ ಯೋಜನೆಗಳನ್ನು ತರಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದನ್ನು ಬಿಟ್ಟು ವಿವಾದಾತ್ಮಕ ಹೇಳಿಕೆ ನೀಡುವುದು ಸಚಿವ ಸ್ಥಾನಕ್ಕೆ ತಕ್ಕದ್ದು ಅಲ್ಲ ಎಂದು ಅವರು ಹೇಳಿದರು.

ಸಾರ್ವಜನಿಕ ಜೀವನದಲ್ಲಿ ಜವಾಬ್ದಾರಿಯುತ ಭಾಷೆ ಬಳಸಬೇಕು ಹಾಗೂ ಅಭಿವೃದ್ಧಿ ಕಾರ್ಯಗಳತ್ತ ಗಮನಹರಿಸಬೇಕು ಎಂದು ಮುದ್ನಾಳ ಆಗ್ರಹಿಸಿದರು.

# ಸೆಪ್ಟಿಕ್‌ಟ್ಯಾಂಕ್ ಸ್ವಚ್ಛಗೊಳಿಸಲು ಹೋದ ಇಬ್ಬರ ಸಾವು

**ಕಲಬುರಗಿ,ಫೆ.19:** ಮನೆಯ ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಲು ಹೋಗಿ ಇಬ್ಬರು ಮೃತಪಟ್ಟಿರುವ ಘಟನೆ ಹೀರಾಪೂರ ಪ್ರದೇಶದ ಬಬಲಾದ ರಸ್ತೆ ಸಮೀಪ ಮಾದರಸನಹಳ್ಳಿಯಲ್ಲಿ ನಡೆದಿದೆ.

ಹೀರಾಪೂರ ವ್ಯಾಪ್ತಿಯ ಮಾದರಸನಹಳ್ಳಿಯ ನಿವಾಸಿ ಆಗಿರುವ ಮನೆ ಮಾಲಕ ಶಿವಕುಮಾರ್ ನಂದುರಕರ(51) ಹಾಗೂ ಅವರ ಗೆಳೆಯ ಇಂದಿರಾ ನಗರದ ನಿವಾಸಿ ರತನ್ ಹೊಟ್ಕರ್ (58) ಮೃತಪಟ್ಟವರು ಎಂದು ತಿಳಿದುಬಂದಿದೆ.

ಶಿವಕುಮಾರ್ ನಂದುರಕರ ಹಾಗೂ ರತನ್ ಹೊಟ್ಕರ್ ಇಬ್ಬರು ಸ್ನೇಹಿತರಾಗಿದ್ದು, ಆಗಾಗ ಸೆಪ್ಟಿಕ್ ಟ್ಯಾಂಕ್ ಅನ್ನು ಸ್ವಚ್ಛಗೊಳಿಸುತ್ತಿದ್ದರು ಎನ್ನಲಾಗಿದೆ. ಅದರಂತೆಯೇ ಮೃತ ಶಿವಕುಮಾರ್ ಅವರ ಮನೆ ಸೆಪ್ಟಿಕ್ ಟ್ಯಾಂಕ್ ಸ್ವಚ್ಛತೆಗೆ ಬುಧವಾರ ಬೆಳಗ್ಗೆ ಇಳಿದಿದ್ದರು



ಎನ್ನಲಾಗಿದ್ದು, ಈ ವೇಳೆ ಉಸಿರುಗಟ್ಟಿ ಹೊರಗಡೆ ಬರಲಾರದೆ ಇಬ್ಬರೂ ಮೃತಪಟ್ಟಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಈ ಕುರಿತು ಅಶೋಕ್ ನಗರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿದೆ.

# ಸುಲಿಗೆ: ಆರೋಪಿಗಳಿಗೆ ಮೂರು ವರ್ಷ ಕಠಿಣ ಕಾರಾಗೃಹ ವಾಸ ಶಿಕ್ಷೆ

**ಕಲಬುರಗಿ,ಫೆ.19**-2016ರಲ್ಲಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಹುಮನಾಬಾದ ಸರ್ಕಲ್ ಸರ್ಕಲ್ ಬಳಿಯ ಟಿ.ವಿ.ಸ್ಟೇಷನ್ ಕ್ವಾಟರ್ಸ್ ಎದರುಗಡೆಯ ರಸ್ತೆಯ ಮೇಲೆ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯೊಬ್ಬರನ್ನು ಆಟೋದಿಂದ ಅಡ್ಡಗಟ್ಟಿ ಅವರ ಬಳಿ ಇದ್ದ ಮೊಬೈಲ್ ಮತ್ತು 3,500 ರೂ.ನಗದು ದೋಚಿದ್ದ ಮೂವರು ಆರೋಪಿಗಳಿಗೆ 3 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆ, ತಲಾ 10 ಸಾವಿರ ರೂ.ದಂಡ ವಿಧಿಸಿದೆ.

ಖಲೀಲ್ ತಂದೆ ಖಾಜಾ ಪಟೇಲ್, ಆಸೀಫ್ ತಂದೆ ಬಹಿಬೂಬ್, ಅವಿನಾಶ ತಂದೆ ಸುಭಾಷಚಂದ್ರ ಮಾಳಾ ಶಿಕ್ಷೆಗೆ ಗುರಿಯಾದ ಆರೋಪಿಗಳಾಗಿದ್ದಾರೆ.

ಇವರು 2016ರಲ್ಲಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಹುಮನಾಬಾದ ಸರ್ಕಲ್ ಸರ್ಕಲ್ ಬಳಿಯ ಟಿ.ವಿ.ಸ್ಟೇಷನ್ ಕ್ವಾಟರ್ಸ್ ಎದರುಗಡೆಯ ರಸ್ತೆಯ ಮೇಲೆ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯೊಬ್ಬನ್ನನು ಅಡ್ಡಗಟ್ಟಿ ಅವರ ಬಳಿ ಇದ್ದ ಮೊಬೈಲ್ ಮತ್ತು 3,500 ರೂ.ನಗದು ದೋಚಿದ್ದರು. ಈ ಬಗ್ಗೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪಿಎಸ್ಐ ಉದ್ದಂಡಪ್ಪ ಮಣ್ಣೂರಕರ್ ಹಾಗೂ ಸಿಪಿಐ ವಾಜೀದ್



ಪಟೇಲ್ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಪ್ರಭಾರಿ 5ನೇ ಜೆಎಂಎಸಿ ನ್ಯಾಯಾಲಯದ ನ್ಯಾಯಾಧೀಶರಾದ ಲಲೀತಾ ಕುದರಿಮತಿ ಅವರು ಆರೋಪಿಗಳಿಗೆ ಮೂರು 3 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆ, ತಲಾ 10 ಸಾವಿರ ರೂ.ದಂಡ ವಿಧಿಸಿದ್ದಾರೆ. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರಾದ ಸಂತೋಷಕುಮಾರ ಲೋಖಂಡೆ ವಾದ ಮಂಡಿಸಿದ್ದರು.

# ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ:ಕಂದಕೂರ



**ಸೈದಾಪುರ:ಫೆ.19:** ಬಂಜಾರ ಸಮುದಾಯದ ಜನರು ಶ್ರಮಜೀವಿಗಳಾಗಿದ್ದು, ಇದರಿಂದ ಆಸ್ತಿ ಮಾಡಿಕೊಳ್ಳಬಹುದು. ಜೊತೆಗೆ ನಿಮ್ಮ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ನೀಡಿ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂದು ಶಾಸಕ ಶರಣಗೌಡ ಕಂದಕೂರ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ಬುಧವಾರ ಆಸ್ಪಲ್ಲಿ ಲೇಔಟ್‌ನಲ್ಲಿ ನಡೆದ ಸಂತ ಶ್ರೀ ಸೇವಲಾಲರ 287ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಯುವಕರು ಸೇವಲಾಲರ ಆಶಯದಂತೆ ದುಶ್ಚಟಗಳಿಂದ ದೂರವಿದ್ದು ಸ್ವಸ್ತ ಸಮಾಜದ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಬೇಕು. ಎಲ್ಲರಂತೆ ನಾವು ಎಂಬುದು ಸೇವಾಲಾಲರ ಕನಸನ್ನು ಒಟ್ಟೂಗೂಡಿಸಿ ಇತರರೊಡನೆ ಕೂಡಿ ಬಾಳುವುದನ್ನು ಕಲಿಯಬೇಕು. ಪ್ರತಿ ತಾಂಡಗಳಲ್ಲಿ ನ್ಯಾಯಬೆಲೆ ಅಂಗಡಿಗಳ ನಿರ್ಮಾಣ ಮತ್ತು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆಗೆ ಸರ್ಕಾರದ ಮೇಲೆ ಒತ್ತಡ ಹೇರುವ ಮೂಲಕ ನಿಮ್ಮ ಪ್ರೀತಿ ವಿಶ್ವಾಸದಿಂದ ತಾಂಡಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಬಂಜಾರ ಸಮುದಾಯದ ಕಟ್ಟಕಡೆಯ ವ್ಯಕ್ತಿಯ ಕಣ್ಣೀರನ್ನು ಒರೆಸಲು ನಾನು ಸದಾ ನಿಮ್ಮ ಜೊತೆಗಿರುತ್ತೇನೆ ಎಂದು ಹೇಳಿದರು.

ಬಾಕ್ಸ್: ಸಂತ ಶ್ರೀ ಸೇವಾಲಾಲ ಮತ್ತು ಮಾರೆಮ್ಮ ದೇವಸ್ಥಾನ ನಿರ್ಮಾಣಕ್ಕೆ ಬದ್ಧ: ಸೈದಾಪುರ ಪಟ್ಟಣದಲ್ಲಿ ಬಂಜಾರ ಸಮುದಾಯದ ಬೇಡಿಕೆಯಂತೆ ನಿಮ್ಮ ಆರಾಧ್ಯ ದೈವ ಸಂತ ಶ್ರೀ ಸೇವಾಲಾಲ ಮತ್ತು ಮಾರೆಮ್ಮ ದೇವಸ್ಥಾನದ ನಿರ್ಮಾಣಕ್ಕೆ ಸಹಕಾರ ನೀಡುವುದರ ಜೊತೆಗೆ ನನ್ನವಧಿ ಪೂರ್ಣಗೊಳ್ಳುವ ಮುನ್ನವೇ ಉದ್ಘಾಟಿಸುವೆ ಎಂದು ಶಾಸಕ ಶರಣಗೌಡ ಕಂದಕೂರ ಹೇಳಿದರು.

ಇದಕ್ಕೂ ಮೊದಲು ಸೈದಾಪುರ ರೈಲು ನಿಲ್ದಾಣದಿಂದ ಬಸವೇಶ್ವರ ವೃತ್ತದ ಮಾರ್ಗವಾಗಿ ಲಕ್ಷೀ ನಗರದವರೆಗೆ ಸೇವಾಲಾಲ್ ಮಾಹಾರಾಜರ ಪ್ರತಿಮೆಯ ಭವ್ಯ ಮೆರವಣಿಗೆ ಹಾಗೂ ಶೋಭಯಾತ್ರೆಯನ್ನು ವಿವಿಧ ವಾದ್ಯಗಳ ಹಾಗೂ ನೃತ್ಯದ ಮೂಲಕ ನೋಡುಗರ ಗಮನ ಸೆಳೆಯಿತು.

ಈ ಸಂದರ್ಭದಲ್ಲಿ ತೆಲಂಗಾಣದ ಮಾಜಿ ವಿಧಾನ ಪರಷತ್ತಿನ ಸದಸ್ಯ ರಾಮುಲು ನಾಯಕ, ಕಥಾ ವಾಚಕ ಎಸ್.ಪಿ.ನಾಯಕ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಶರಣಿಕ ಕುಮಾರ ದೊಕಾ, ಚಂದ್ರಶೇಖರ ವಾರಾದ, ಬಸವಂತರಾಯಗೌಡ, ಚಂದ್ರುಗೌಡ, ನರಸಪ್ಪ ಕವಡೆ, ಗುರುನಾಥರೆಡ್ಡಿಗೌಡ, ಶ್ರೀದೇವಿ ಶೆಟ್ಟಿಹಳ್ಳಿ, ಸುನಿತಾಬಾಯಿ ಚವ್ಹಾಣ, ರಾಜೇಶ ಉಡುಪಿ, ವೆಂಕಟೇಶ ಗಡದ, ಸುರೇಶ ಮರಡಿ, ಸುಭಾಸ ಚಂದ್ರ ಕಟಕಟಿ, ಲಕ್ಷ ಣ ನಾಯಕ ಕೂಡ್ಲೂರು, ಅರ್ಜುನ ಚವ್ಹಾಣ, ಭೀಮು ಚವ್ಹಾಣ, ಏಕನಾಥ ಚವ್ಹಾಣ, ಧರ್ಮರಾಜ ರಾಠೋಡ, ಕುಂದನ ಕುಮಾರ ಚವ್ಹಾಣ, ಅಂಬ್ರೇಶ ರಾಠೋಡ, ರಾಜು ಚವ್ಹಾಣ, ರವಿ ರಾಠೋಡ, ಕಾಶಿನಾಥ ಚವ್ಹಾಣ, ಗೋವಿಂದ ಚವ್ಹಾಣ, ವಿಶ್ವನಾಥ ಚವ್ಹಾಣ, ಸಂತೋಷ ಚವ್ಹಾಣ, ಬಾಲಾಜಿ ಚವ್ಹಾಣ, ರವಿಕಿಶನ, ಜಿತೇಂದ್ರ, ವೆಂಕಟೇಶ, ಅಜಯಕುಮಾರ ಗೊಬ್ರು, ವಿಷ್ಣು, ರಮೇಶ ಸೇರಿದಂತೆ ಇತರರಿದ್ದರು.

ಸಂತ ಸೇವಾಲಾಲ್ ಮಹಾರಾಜರ ಜೀವನ ಚರಿತ್ರೆ ಪಠ್ಯಪುಸ್ತಕದಲ್ಲಿ ಅಳವಡಿಸಿ ಅವರ ತತ್ವ ಆದರ್ಶಗಳು ಯುವಕರಿಗೆ ಮುಟ್ಟಿಸುವ ಕೆಲಸವಾಗಬೇಕು. ಬಂಜಾರ ಸಮೂದಾಯದವರು ಮತದಾನವನ್ನು ಮಾರಿಕೊಳ್ಳದೆ ಸಮಜಾದ ಪರವಾಗಿ ಕೆಲಸ ಮಾಡುವವರಿಗೆ ಬೆಂಬಲಿಸಬೇಕು.

ರಾಮುಲು ನಾಯಕ ತೆಲಂಗಾಣದ ಮಾಜಿ ವಿಧಾನ ಪರಷತ್ತಿನ ಸದಸ್ಯರು.

# ಕುಖ್ಯಾತ ಬೈಕ್ ಕಳ್ಳರ ಬಂಧನ:12.60 ಲಕ್ಷ ರೂ.ಮೌಲ್ಯದ 14 ಬೈಕ್ ವಶ

**ಕಲಬುರಗಿ,ಫೆ.19**-ನಗರದ ಸಬ್-ಅರ್ಬನ್ ಪೊಲೀಸರು ಇಬ್ಬರು ಅಂತರರಾಜ್ಯ ಕುಖ್ಯಾತ ಬೈಕ್ ಕಳ್ಳರನ್ನು ಬಂಧಿಸಿ 12.60 ಲಕ್ಷ ರೂ.ಮೌಲ್ಯದ 14 ಬೈಕ್‌ಗಳನ್ನು ವಶಪಡಿಸಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.



ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮನೆ ಮುಂದೆ ನಿಲ್ಲಿಸಿದ ಬೈಕ್ ಕಳವಾಗಿದೆ ಎಂದು ನಗರದ ಮಹಾಲಕ್ಷ್ಮೀ ಲೇಔಟ್‌ನ ರೋಹಿತ್ ಕೋಲಾರ್ಕರ್ ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ನಗರ ಪೊಲೀಸ್ ಆಯುಕ್ತರಾದ ಡಾ.ಶರಣಪ್ಪ ಎಸ್.ಡಿ, ಡಿಸಿಪಿ ಪ್ರವೀಣ್ ಹೆಚ್.ನಾಯಕ್ ಮತ್ತು ಸಬ್-ಅರ್ಬನ್ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಬಸವೇಶ್ವರ ಹೀರಾ ಅವರ ಮಾರ್ಗದರ್ಶನದಲ್ಲಿ ಸಬ್-ಅರ್ಬನ್ ಪೊಲೀಸ್ ಠಾಣೆ ಪಿಐ ನಟರಾಜ ಲಾಡೆ ಅವರ ನೇತೃತ್ವದಲ್ಲಿ ಪಿಎಸ್ಐ ಶಶಿಕಲಾ, ಸಿಬ್ಬಂದಿಗಳಾದ ವೆಂಕಟರೆಡ್ಡಿ, ಮಲ್ಲಿಕಾರ್ಜುನ, ಸುಲ್ತಾನ್, ಮಂಜುನಾಥ, ಫಿರೋಜ್, ಅನೀಲ ಮತ್ತು ಹಣಮಂತ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ನಗರದ ಕಪನೂರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ನಗರದ ಮೋಮಿನಪುರ ಗೋಳಾ ಚೌಕ್‌ನ ಮೊಹ್ಮದ್ ನಾಸೀರ್ (24) ಮತ್ತು ಮಿಲ್ಲತ್ ನಗರದ ಮಹ್ಮದ್ ಆರೀಫ್ (19) ಅವರನ್ನು ಬಂಧಿಸಿ 12.60 ಲಕ್ಷ ರೂ.ಮೌಲ್ಯದ ವಿವಿಧ ಕಂಪನಿಯ 14 ಬೈಕ್ ಗಳನ್ನು ಜಪ್ತಿ ಮಾಡಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ತಿಳಿಸಿದರು.

ಅಂತರರಾಜ್ಯ ಕುಖ್ಯಾತ ಬೈಕ್ ಕಳ್ಳರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

# ಯುನೈಟೆಡ್ ಆಸ್ಪತ್ರೆ 14ನೇ ವಾರ್ಷಿಕೋತ್ಸವ: ಉಚಿತ ಮೆಗಾ ಆರೋಗ್ಯ ಶಿಬಿರ : ಅಗ್ಗದ ದರದಲ್ಲಿ ಉನ್ನತ ಚಿಕಿತ್ಸೆಗಾಗಿ ಪೊಲೀಸ್ ಆಯುಕ್ತರ ಶ್ಲಾಘನೆ

**ಕಲಬುರಗಿ:ಫೆ.19:**ಅಗ್ಗದ ದರದಲ್ಲಿ ಉತ್ಕೃಷ್ಟ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಯುನೈಟೆಡ್ ಆಸ್ಪತ್ರೆ ಮಹತ್ತರ ಪಾತ್ರ ವಹಿಸಿದೆ ಹಾಗೂ ಕಲಬುರಗಿಯನ್ನು ಪ್ರಾದೇಶಿಕ ಆರೋಗ್ಯ ಹಬ್ ಆಗಿ ರೂಪಿಸುವಲ್ಲಿ ಈ ಆಸ್ಪತ್ರೆಯ ಕೊಡುಗೆ ಗಮನಾರ್ಹವಾಗಿದೆ ಎಂದು ಕಲಬುರಗಿ ಪೊಲೀಸ್ ಆಯುಕ್ತ ಎಸ್.ಡಿ. ಶರಣಪ್ಪ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಬುಧವಾರ ಯುನೈಟೆಡ್ ಆಸ್ಪತ್ರೆಯ 14ನೇ ವಾರ್ಷಿಕೋತ್ಸವದ ಅಂಗವಾಗಿ ಆಸ್ಪತ್ರೆ ಆವರಣದಲ್ಲಿ ಆಯೋಜಿಸಿದ್ದ ಉಚಿತ ಮೆಗಾ ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಇಪ್ಪತ್ತು ವರ್ಷಗಳ ಹಿಂದೆ ಕಲಬುರಗಿಯಿಂದ ಗಂಭೀರ ಚಿಕಿತ್ಸೆಗಾಗಿ ಜನರು ಬೇರೆ ನಗರಗಳಿಗೆ ತೆರಳಬೇಕಾಗುತ್ತಿತ್ತು. ಅಪಘಾತ ಹಾಗೂ ತುರ್ತು ಚಿಕಿತ್ಸೆಗಳ ಕೊರತೆಯಿಂದ ಅನೇಕ ಪ್ರಾಣಹಾನಿಗಳು ಸಂಭವಿಸುತ್ತಿದ್ದವು. ಆದರೆ ಇಂದು ಯುನೈಟೆಡ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಶಸ್ತ್ರಚಿಕಿತ್ಸೆಗಳು ಹಾಗೂ ತೀವ್ರ ನಿಗಾ ಸೇವೆಗಳು ಲಭ್ಯವಿರುವುದರಿಂದ ಜನರು ತಮ್ಮದೇ ನಗರದಲ್ಲಿ ಚಿಕಿತ್ಸೆ ಉತ್ಕೃಷ್ಟ ದರ್ಜೆಯ ಆರೋಗ್ಯ ಸೇವೆಗಳನ್ನು ಕೈಗೆಟುಕುವ ದರಗಳಲ್ಲಿ ಪಡೆಯುತ್ತಿದ್ದಾರೆ," ಎಂದು ಅವರು ಹೇಳಿದರು.

ಕಳೆದ 14 ವರ್ಷಗಳಲ್ಲಿ ಸುಮಾರು 40,000 ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಿರುವುದು ಆಸ್ಪತ್ರೆಯ ಮೇಲೆ ಜನರು ಇಟ್ಟಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದ ಅವರು ಈ ಅಂಕಿ-ಅಂಶವೇ ಆಸ್ಪತ್ರೆಯ ಸೇವಾಭಾವ ಮತ್ತು ಆರೋಗ್ಯಕರ ಸಮಾಜ ನಿರ್ಮಾಣದ ಬದ್ಧತೆಯನ್ನು ತೋರಿಸುತ್ತದೆ ಎನ್ನುತ್ತಾ ಆಸ್ಪತ್ರೆಯು ಇನ್ನಷ್ಟು ಉನ್ನತ ಹಂತಕ್ಕೆ ಬೆಳೆಯಲಿ ಹಾಗೂ ಆ ಮೂಲಕ ಇನ್ನೂ ಹೆಚ್ಚಿನ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡಲಿ ಶುಭಾಶಯ ಕೋರಿದರು.

ಪೊಲೀಸ್ ಮತ್ತು ವೈದ್ಯ ವೃತ್ತಿಗಳ ನಡುವಿನ ಸಾಮ್ಯತೆಯನ್ನು





ಉಲ್ಲೇಖಿಸಿದ ಅವರು, "ವೈದ್ಯರು ದೇಹದ ರೋಗಗಳ ವಿರುದ್ಧ ಹೋರಾಡಿ ಮಾನವ ಜೀವಗಳನ್ನು ಉಳಿಸುತ್ತಾರೆ. ಪೊಲೀಸರು ಅಪರಾಧಗಳಂತಹ ಸಮಾಜಿಕ ರೋಗಗಳ ವಿರುದ್ಧ ಹೋರಾಡಿ ಸಮಾಜವನ್ನು ರಕ್ಷಿಸುತ್ತಾರೆ. ಎರಡೂ ವೃತ್ತಿಗಳು ಆರೋಗ್ಯಕರ ಹಾಗೂ ಸುರಕ್ಷಿತ ಸಮಾಜ ನಿರ್ಮಾಣಕ್ಕೆ ಅಗತ್ಯವಾದವು," ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು ಮಾತನಾಡಿ, ರಸ್ತೆ ಸುರಕ್ಷತೆ ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮಗಳಲ್ಲಿ ಯುನೈಟೆಡ್ ಆಸ್ಪತ್ರೆ ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಿ ಕೆಲಸ ಮಾಡುತ್ತಿರುವುದನ್ನು ಶ್ಲಾಘಿಸಿದರು. "ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವುದು, ಪ್ರಥಮ ಚಿಕಿತ್ಸೆ ಕಿಟ್ಗಳು ಮತ್ತು ಹೆಲ್ಮೆಟ್ಗಳನ್ನು ವಿತರಿಸುವುದು ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಆಸ್ಪತ್ರೆ ನಿರಂತರವಾಗಿ ಭಾಗವಹಿಸುತ್ತಿದೆ. ಪೊಲೀಸ್ ಸಿಬ್ಬಂದಿಗೂ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ನೀಡುತ್ತಿದೆ," ಎಂದು ಹೇಳಿದರು.

ಯುನೈಟೆಡ್ ಆಸ್ಪತ್ರೆಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ. ವಿಕ್ರಮ್ ಸಿದ್ದಾರೆಡ್ಡಿ ಮಾತನಾಡಿ, 20 ಹಾಸಿಗೆಗಳ ಸಣ್ಣ ಆಸ್ಪತ್ರೆಯಿಂದ ಆರಂಭವಾದ ಈ ಸಂಸ್ಥೆ ಇಂದು ಕಲ್ಯಾಣ ಕರ್ನಾಟಕದ ಪ್ರಮುಖ ಬಹು ವಿಶೇಷತೆಗಳ ಆಸ್ಪತ್ರೆಯಾಗಿ ಬೆಳೆಯಿರುವುದನ್ನು ಸ್ಮರಿಸಿದರು.

"14 ವರ್ಷಗಳ ಹಿಂದೆ ಹಿರಿಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆ ಅವರು ಆಸ್ಪತ್ರೆಗೆ ಚಾಲನೆ ನೀಡಿದ್ದರು. ಆಗ ಸಮಯದಲ್ಲಿ ಕಲಬುರಗಿಯಲ್ಲಿ ಅಪಘಾತ ಮತ್ತು ತುರ್ತು ಚಿಕಿತ್ಸಾ ಸೌಲಭ್ಯಗಳ ಕೊರತೆಯಿಂದ ಅಫಘಾತಗಳಲ್ಲಿ ತೀವ್ರವಾಗಿ ಗಾಯಗೊಂಡವರು ಸಾಯುತ್ತಿದ್ದುದರ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಉನ್ನತ ಚಿಕಿತ್ಸೆಗಾಗಿ ಜನರು ಸೋಲಾಪುರ, ಹೈದರಾಬಾದ್ ಅಥವಾ ಬೆಂಗಳೂರುಗಳಿಗೆ ತೆರಳಬೇಕಾದ ಪರಿಸ್ಥಿತಿಯನ್ನು ಬದಲಿಸಬೇಕಾದ ಅನಿವಾರ್ಯತೆಯನ್ನು ವ್ಯಕ್ತಪಡಿಸಿದ್ದರು. ಆ ನಿಟ್ಟಿನಲ್ಲಿ ಯುನೈಟೆಡ್ ಆಸ್ಪತ್ರೆಯನ್ನು ಬೆಳೆಸಬೇಕು, ಅತ್ಯಾಧುನಿಕ ಸೇವೆಗಳನ್ನು ಅಗ್ಗದ ದರದಲ್ಲಿ ಒದಗಿಸುವ ಸಂಸ್ಥೆಯನ್ನಾಗಿ ಕಟ್ಟಬೇಕು ಎಂದು ಸೂಚಿಸಿದ್ದರು. ಕೆಲವೇ ವರ್ಷಗಳಲ್ಲಿ ನಾವು ಆ ಗುರಿಯನ್ನು ಸಾಧಿಸಿಬಿಟ್ಟೆವು," ಎಂದು ಹೇಳಿದರು.

ಆಸ್ಪತ್ರೆಯಲ್ಲಿರುವ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳು, ರೋಗಪತ್ತೆ ಸೌಲಭ್ಯಗಳು, ಮೋಡ್ಯೂಲರ್ ಕ್ಯಾಥ್ ಲ್ಯಾಬ್ ಹಾಗೂ ವಿಶೇಷ ತೀವ್ರ ನಿಗಾ ಘಟಕಗಳ ಬಗ್ಗೆ ಗಮನ ಸೆಳೆದ ಅವರು ಕಳೆದ ಹದಿನಾಲ್ಕು ವರ್ಷಗಳಲ್ಲಿ ಆಸ್ಪತ್ರೆಯು ಸಾವಿರಾರು ಅಮೂಲ್ಯ ಜೀವಗಳನ್ನು ಉಳಿಸಿದೆ ಎಂದರು.

ಇಡೀ ದಿನ ನಡೆದ ಮೆಗಾ ಆರೋಗ್ಯ ಶಿಬಿರದಲ್ಲಿ ಸಾವಿರಾರು ಜನರನ್ನು ತಜ್ಞ ವೈದ್ಯರು ಮತ್ತು ವಿಶೇಷಜ್ಞರು ಪರಿಶೀಲಿಸಿದರು. ಆಸ್ಪತ್ರೆ ನೀಡಿದ ಮಾಹಿತಿಯಂತೆ, 2,200ಕ್ಕೂ ಹೆಚ್ಚು ಹೊರರೋಗಿ (ಔಕಆ) ಜನರು ತಪಾಸಣೆಗೆ ಒಳಗಾಗಿದ್ದು, ಎಂಆ???ಐ, ಸಿಟಿ ಸ್ಕ್ಯಾನ್, 2ಡಿ ಎಕೊ, ಇಸಿಜಿ, ಯುಎಸ್‌ಜಿ, ಎಕ್ಸ್‌ರೇ ಹಾಗೂ ರಕ್ತ ಪರೀಕ್ಷೆಗಳು ಸೇರಿದಂತೆ ವಿವಿಧ ತನಿಖೆಗಳು ಉಚಿತವಾಗಿ ಮಾಡಿಸಲಾಯಿತು. ಶಿಬಿರದ ಸಂದರ್ಭದಲ್ಲಿ ವೈದ್ಯರು ಸೂಚಿಸಿದ ಔಷಧಿಗಳನ್ನು ಸಹ ಉಚಿತವಾಗಿ ವಿತರಿಸಲಾಯಿತು.

ಆಸ್ಪತ್ರೆಯ ಹಿರಿಯ ನೇತ್ರ ತಜ್ಞೆ ಹಾಗೂ ನಿರ್ದೇಶಕಿ ಡಾ. ವೀಣಾ ಸಿದ್ದಾರೆಡ್ಡಿ; ಮೂಳೆ ಶಸ್ತ್ರಚಿಕಿತ್ಸಕರಾದ ಡಾ. ರಾಜು ಕುಲಕರ್ಣಿ ಮತ್ತು ಡಾ. ನಿಶಾಂತ್ ಜಾಜಿ; ಸಾಮಾನ್ಯ ಶಸ್ತ್ರಚಿಕಿತ್ಸಕರಾದ ಡಾ. ಮೊಹಮ್ಮದ್ ಅಬ್ದುಲ್ ಬಸೀರ್; ಫಿಜಿಷಿಯನ್ನರಾದ ಡಾ. ವೀರೇಶ್ ಸಲಗಾರ್, ಡಾ. ದಯಾನಂದ ರೆಡ್ಡಿ ಮತ್ತು ಡಾ. ವಹೀದ್ ಅಲಿ; ಮಕ್ಕಳ ತಜ್ಞರಾದ ಡಾ. ಪ್ರಶಾಂತ್ ಕುಲಕರ್ಣಿ; ತೀವ್ರ ನಿಗಾ ತಜ್ಞರಾದ ಡಾ. ಸುದರ್ಶನ್ ಲಾಖೆ, ಡಾ. ಮಂಜುನಾಥ್ ರೆಡ್ಡಿ, ಡಾ. ಆನಂದ್ ಮತ್ತು ಡಾ. ರತೇಶ್; ನರಶಸ್ತ್ರಚಿಕಿತ್ಸಕರಾದ ಡಾ. ವಿನಯಸಾಗರ್ ಶರ್ಮಾ; ನರರೋಗ ತಜ್ಞರಾದ ಡಾ. ಅನಿಲ್ ಪಾಟೀಲ; ಮೂತ್ರರೋಗ ತಜ್ಞರಾದ ಡಾ. ಕೈಲಾಶ್ ಬನಾಲೆ; ಓಎಂಎಫ್ ಶಸ್ತ್ರಚಿಕಿತ್ಸಕರಾದ ಡಾ. ಯು.ಕೆ. ಜೋಶಿ; ಸ್ತ್ರೀರೋಗ ತಜ್ಞರಾದ ಡಾ. ಶ್ವೇತಾ ಆಳಂದ್; ರೇಡಿಯಾಲಜಿಸ್ಟ್ ಡಾ. ರಾಮಚಾರಿ; ಪ್ಲಾಸ್ಟಿಕ್ ಶಸ್ತ್ರಚಿಕಿತ್ಸಕರಾದ ಡಾ. ಪವನ ಪಾಟೀಲ; ಜೀಣಾರ್ಂಗ ತಜ್ಞರಾದ ಡಾ. ಶ್ರನಾಥ್ ಪಾಟೀಲ; ನೇತ್ರ ತಜ್ಞೆಯರಾದ ಡಾ. ಸಫೀಹಾ ಮತ್ತು ಡಾ. ರೇಣುಕಾ; ನೇತ್ರತಜ್ಞೆಯರಾದ ಡಾ. ಸಫೀಹಾ ಮತ್ತು ಡಾ. ರೇಣುಕಾ; ಫಿಜಿಯೋಥೆರಪಿಸ್ಟ್ ಡಾ. ಅಬ್ದುಲ್ ಹಕೀಮ್ ಸೇರಿದಂತೆ ಇತರ ಹಿರಿಯ ವೈದ್ಯರು ಉಪಸ್ಥಿತರಿದ್ದರು.

# ಆಸಕ್ತಿಯಂತೆ ಶಿಕ್ಷಣ ಕಲ್ಪಿಸಿದರೆ ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣ:ಮುನಿರಾಜ




**ಬಳ್ಳಾರಿ, ಫೆ.19:** ಪೋಷಕರು ತಮ್ಮ ಆಸಕ್ತಿಯಂತೆ ಮಕ್ಕಳನ್ನು ಓದಿಸದೇ, ಮಕ್ಕಳಲ್ಲಿರುವ ಇಚ್ಛಾಶಕ್ತಿಯಂತೆ ಅವರಿಗೆ ಶಿಕ್ಷಣ ಕಲ್ಪಿಸಿದರೆ ಆ ಮಕ್ಕಳ ಭವಿಷ್ಯ ಉಜ್ವಲವಾಗಲಿದೆಂದು ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಮುನಿರಾಜ್ ಹೇಳಿದ್ದಾರೆ.

ಅವರು ನಿನ್ನೆ ಖಾಸಗಿ ಹೊಟೇಲ್ ಸಭಾಂಗಣದಲ್ಲಿ ಗ್ಯಾರಂಟಿ ನ್ಯೂಸ್ ಮತ್ತು ಡ್ 6 ಹಾಗೂ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಪ್ರಿನ್ಸಿಪಲ್ ಮೀಟ್ ಕಾರ್ಯಕ್ರಮದಲ್ಲಿ ಪಿಯುಸಿ ನಂತರ ಮುಂದೇನು ಎಂಬ ವಿಚಾರ ಸಂಕಿರಣ ಉದ್ಘಾಟನೆ ಮಾಡಿ ಮಾತನಾಡಿದರು.

ಎಐ (ಕೃತಕ ಬುದ್ಧಿಮತ್ತೆ) ಜಾಗತಿಕ ಯುಗದಲ್ಲಿ ಅನೇಕ ತಾಂತ್ರಿಕ ಶಿಕ್ಷಣದ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ.ಮೆಡಿಕಲ್, ಇಂಜಿನಿಯರ್ ಹೀಗೆ ಹಲವಾರು ಕೋರ್ಸ್ ಗಳಿಗೆ ಕಾಲಕ್ಕೆ ತಕ್ಕಂತೆ ಬೇಡಿಕೆ ಹೆಚ್ಚುತ್ತಿದೆ.ಪೋಷಕರು ತಮ್ಮ ಮಕ್ಕಳು ಯಾವ ವಿಷಯದಲ್ಲಿ ಆಸಕ್ತಿ ಇದ್ದಾರೆ ಆ ವಿಷಯದ ಕೋರ್ಸ್ ಓದಿಸಬೇಕು.ವಿದ್ಯಾರ್ಥಿಗಳು ಪಿಯುಸಿ ನಂತರ ಮುಂದೇ ಆಯ್ಕೆ ಮಾಡುವ ಕೋರ್ಸ್ ಗಳ ಬಗ್ಗೆ ಸಂವಾದ ಮಾಡುತ್ತಿರುವದರಿಂದ ಇದರಿಂದ ಅನುಕೂಲವಾಗಲಿದೆಂದರು.

ಬಳ್ಳಾರಿ ವಲಯದ ಪೊಲೀಸ್ ಮಹಾನಿರೀಕ್ಷಕ ಡಾ.ಪಿ.ಎಸ್.ಹರ್ಷ ಮಾತನಾಡಿ,ಇಂದಿನ ವಿದ್ಯಾರ್ಥಿಗಳು ಪಿಯುಸಿ ಓದು ಮುಗಿಸಿದ ನಂತರ ಮೆಡಿಕಲ್, ಇಂಜಿನಿಯರ್, ತಾಂತ್ರಿಕ ಶಿಕ್ಷಣ ಸೇರಿ ಹಲವಾರು ಕೋರ್ಸ್ ಓದುತ್ತಾರೆ.ಕಾಲಕ್ಕೆ ತಕ್ಕಂತೆ ಈಗ ಕಲಿಕಾ ಮಟ್ಟ ಬದಲಾವಣೆ ಆಗಿದೆ.ಈಗ ಉತ್ತರ ಸಿಗುವುದು ಸುಲಭವಾಗಿದೆ.ಆದರೆ ಪ್ರಶ್ನೆ ಮಾಡುವ ಬುದ್ದಿವಂತಿಕೆ ಜಾಗ್ರತಗೊಳಿಸಬೇಕಿದೆ.ಮಕ್ಕಳು ಮನಸ್ಸು ಗಗನಕ್ಕೆ ಚಿಮ್ಮುವಷ್ಟು ಪೋಷಕರು ಮಕ್ಕಳ ಉತ್ತಮ ಕನಸು ನನಸಾಗಲು ಪ್ರೋತ್ಸಾಹಿಸಬೇಕಿದೆ.ನುರಿತ ತಜ್ಞರ ಮೂಲಕ ಸಂವಾದ ಕಾರ್ಯಕ್ರಮ ಮಾಡುವ ಕಾರ್ಯ ಶ್ಲಾಘನೀಯವಾಗಿದೆಂದರು.

ಈ ವೇಳೆ ಗ್ಯಾರಂಟಿ ನ್ಯೂಸ್ ನ ಸಂಪಾದಕ ಸತೀಶ್ ಅಂಜಿನಪ್ಪ ಮಾತನಾಡಿ, ಎಐ ಯುಗದಲ್ಲಿ ತಾಂತ್ರಿಕ ಶಿಕ್ಷಣದ ಬೇಡಿಕೆ ಹೆಚ್ಚಾಗಿದೆ.ಯಾವ ಕೋರ್ಸ್ ಓದಬೇಕು,ವಿದ್ಯಾರ್ಥಿಗಳ ಭವಿಷ್ಯ ಹೇಗಿರಬೇಕೆಂಬುದು ಸವಾಲ್ ಇದೆ.ಮಕ್ಕಳ ಭವಿಷ್ಯ ಬದಲಾವಣೆಗೆ ಯಾವ ಕೋರ್ಸ್ ಓದಬೇಕೆಂಬ ಗೊಂದಲ,ಸವಾಲ್ ನಿವಾರಣೆಗಾಗಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಗ್ಯಾರಂಟಿ ನ್ಯೂಸ್ ವತಿಯಿಂದ ಪ್ರಿನ್ಸಿಪಲ್ ಮೀಟ್ ಮೂಲಕ ಪಿಯುಸಿ ನಂತರ ಮುಂದೇನು ವಿಚಾರ ಸಂಕಿರಣ ಕಾರ್ಯಕ್ರಮದ ಮೂಲಕ ಪಿಯುಸಿ ಓದಿದ ನಂತರ ಯಾವ ಕೋರ್ಸ್ ಓದಿದರೆ ವಿದ್ಯಾರ್ಥಿಗಳ ಭವಿಷ್ಯ ಬದಲಾವಣೆ ಯಾಗುತ್ತದೆ ಎಂಬ ಅರಿವು ಮಾಡಿಸಲಾಗುತ್ತಿದೆಂದರು. ಕಾರ್ಯಕ್ರಮದಲ್ಲಿ ಬೆಂಗಳೂರುನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಕೆ.ರಮೇಶ್ ಬಾಬು, ಎಸಿಸಿಇಎ ಅಧ್ಯಕ್ಷ ಎ.ಎಸ್.ಸತ್ಯನಾರಾಯಣ, ಶ್ರೀ ನಂದಿ ಎಜ್ಯುಕೇಶನ್ ಅಂಡ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷೆ ಡಾ.ಅನುರಾಧ ಎಸ್.ಜಿ., ವೆಂಕಟೇಶ ಕುಲಕರ್ಣಿ, ಅಶೋಕ ಭಟ್ಟ, ಕಣ್ಣನ್, ಬಿರಾಳ,ನಾಗಪ್ಪ ಮಾಲಿಪಾಟೀಲ, ರಾಧಾಕೃಷ್ಣ ಮೊದಲಾದವರು ಇದ್ದರು.ಬಸವರಾಜ ಕಾರ್ಯಕ್ರಮ ನಿರೂಪಿಸಿ ವಂದಿಸಿದರು

# ವಾಡಿ ರೈಲ್ವೆ ನಿಲ್ದಾಣದ ಅಭಿವೃದ್ಧಿಗಾಗಿ ಮನವಿ

**ವಾಡಿ: ಫೆ.19:**ಪಟ್ಟಣದ ರೈಲ್ವೆ ನಿಲ್ದಾಣದಲ್ಲಿನ ಅಭಿವೃದ್ಧಿ ಕಾಮಗಾರಿಗಳ ಮತ್ತು ಕುಂದು ಕೊರತೆಗಳನ್ನು ವೀಕ್ಷಿಸಿಲು ಆಗಮಿಸಿದ ಮುಂಬಯಿ ರೈಲ್ವೆ ವಿಭಾಗದ ಮುಖ್ಯ ವ್ಯವಸ್ಥಾಪಕರಾದ ಪ್ರತೀಕ್ ಗೋಸ್ವಾಮಿ ಅವರಿಗೆ ಬಿಜೆಪಿ ಮುಖಂಡರು ಮನವಿ ಸಲ್ಲಿಸಿದರು.



ಈ ವೇಳೆ ಸ್ಥಳೀಯ ಬಿಜೆಪಿ ಅಧ್ಯಕ್ಷ ವೀರಣ್ಣ ಯಾರಿ,ಮುಖಂಡ ರಾಜು ಮುಕ್ಕಣ್ಣ ಅವರು ವಾಡಿ ಪಟ್ಟಣದ ರೈಲ್ವೆ ಅಭಿವೃದ್ಧಿ ಬಗ್ಗೆ ವಿವರಿಸಿ ವಾಡಿ ತನ್ನದೆ ಆದ ಇತಿಹಾಸ ಹೊಂದಿದೆ, ಪುರಾತನ ರೈಲ್ವೆ ನಿಲ್ದಾಣದಲ್ಲಿ ಇದು ಒಂದಾಗಿದೆ, ಭಾರತ ರತ್ನ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇಲ್ಲಿ ಭೇಟಿ ಕೊಟ್ಟಿದ್ದಾರೆ ಎಂದರು.

ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಜಿ ಅವರು ಅಮೃತ್ ಭಾರತ್ ಸ್ಟೇಷನ್ ಸ್ಕೀಮ್ ನಲ್ಲಿ ಈ ರೈಲ್ವೆ ನಿಲ್ದಾಣದ ಕಾಮಗಾರಿ ಕೈಗೆತ್ತಿಕೊಂಡಿದ್ದು ನಮಗೆ ತುಂಬಾ ಖುಷಿಯಾಗಿದೆ.
ಆದರೆ ಈ ನಿಲ್ದಾಣ ಅನೇಕ ಸಮಸ್ಯೆಗಳ ತಾಣವಾಗಿದೆ, ಕಾಮಗಾರಿ ವಿಳಂಬದ ಜೊತೆಗೆ ಕಳಪೆಯಾಗುತ್ತಿರುವುದು ಬೇಸರ ಮೂಡಿಸಿದೆ ಇದರ ಬಗ್ಗೆ ತಾವು ಹೆಚ್ಚಿನ ಗಮನ ಕೊಡಿ.ಸಮಸ್ಯೆಗಳ ಪಟ್ಟಿ ಯನ್ನು ನೀಡುತ್ತಿದ್ದು,ಅವುಗಳನ್ನು ಪರಿಹರಿಸಿ ಎಂದು ಕೇಳಿಕೊಂಡರು.

1) ಪ್ಲೈಓರ ಹಾಗೂ ಬ್ರಿಡ್ಜ್ ಕಳಪೆ ಕಾಮಗಾರಿ ವಿರುದ್ಧ ಕ್ರಮಕೈಗೊಂಡು,ಗುಣಮಟ್ಟದೊಂದಿಗೆ ಆದಷ್ಟು ಬೇಗ ಪೂರ್ಣಗೊಳಿಸಿ.

2) ವಾಡಿ ಪಟ್ಟಣದ ಸುತ್ತಾ ರೈಲ್ವೆ ಗೇಟ್ ಗಳು ಆವರಿಸಿಕೊಂಡಿರುವುದರಿಂದ,ಜನರು ಬಹಳಷ್ಟು ತೊಂದರೆ ಅನುಭವಿಸುತ್ತಿದ್ದು,ಒಳ ಸುತುವೆ ಅಥವಾ ಮೇಲ ಸೇತುವೆ ನಿರ್ಮಿಸಿ.

3) ಹನುಮಾನ ನಗರ,ವಿಜಯ ನಗರ, ಸೋಮ್ಲಾ ತಾಂಡಾ ಹಾಗೂ ಇಂದಿರಾ ನಗರಕ್ಕೆ ಹೋಗಬೇಕಾದರೆ ರೈಲ್ವೆ ಹಳಿ ದಾಟಿಯೇ ಹೋಗಬೇಕು,
ಸುಮಾರು ಏಳು ಎಂಟು ಸಾವಿರ ಬಡ ಕುಟುಂಬ ವಾಸಿಸುವ ಬಡಾವಣೆಗಳಿವೆ.
ಇಲ್ಲಿನ ಜನರಿಗೆ ಸುರಕ್ಷಿತವಾಗಿ ಒಳ ಸೇತುವೆ ನಿರ್ಮಾಣ ಅತೀ ಅವಶ್ಯಕವಾಗಿದೆ.

4) ಕೊಲ್ಲಾಪುರ ರೈಲನ್ನು ವಾಡಿ ಯಿಂದ ಪ್ರಾರಂಭಿಸಿ, ತಲುಪುವಂತೆ ಮಾಡಿ,
ಕಾಚಿಗುಡಾ ಪ್ಯಾಸೆಂಜರ್ ರೈಲು ಕಲಬುರಗಿ ಯಿಂದ ಪ್ರಾರಂಭಿಸಿ,ತಲುಪುವಂತೆ ಹಾಗೂ ವಂದೇ ಭಾರತ ರೈಲನ್ನು ವಾಡಿ ನಿಲ್ದಾಣದಲ್ಲಿ ನಿಲ್ಲಿಸು ಸೂಚಿಸಿ ಇದ್ದರಿಂದ ಬಹಳಷ್ಟು ಜನತೆಗೆ ತುಂಬಾ ಅನುಕೂಲ ಆಗುತ್ತದೆ.

5) ರೈಲ್ವೆ ನಿಲ್ದಾಣದ ಕೊಳಚೆ ನೀರು ವಾರ್ಡ್ ಸಂಖ್ಯೆ 20ರಲ್ಲಿ ಹರಿದು ಹೊಗುತ್ತಿರುವುದರಿಂದ,ಮಳೆಗಾಲದಲ್ಲಿ ಜನರು ಸಂಕಟಕ್ಕೆ ಸಿಲುಕುತ್ತಿದ್ದು ಇದನ್ನು ಪರಿಹರಿಸಿ.

6) ನಿಲ್ದಾಣದಲ್ಲಿ ಶೌಚಾಲಯ ಮತ್ತು ವೇಟಿಂಗ್ ಹಾಲ ಸಮರ್ಕವಾದ ನಿರ್ವಾಣೆ ಇಲ್ಲದೇ ಇರುವುದರಿಂದ ಪ್ರಯಾಣಿಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ.

7) ನಿಲ್ದಾಣದಲ್ಲಿ ಪ್ರಥಮ ಚಿಕಿತ್ಸೆ ಗಾಗಿ ವೈದ್ಯರೊಂದಿಗೆ ಔಷಧ ಅಂಗಡಿ, ಸ್ವದೇಶಿ ಮಳಿಗೆ ಪ್ರಾರಂಭಕ್ಕೆ ಒತ್ತು ನೀಡಿ. ಗುಟುಕಾ,ದೊಮ್ರಪಾನ ಹಾಗೂ ಪ್ಲಾಸ್ಟಿಕ್ ನಿಷೇಧಕ್ಕೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಿ.

8)ಜನರ ಮತ್ತು ಜಾನುವಾರುಗಳ ಸುರಕ್ಷಿತೆಗಾಗಿ ನಿಲ್ದಾಣದ 3 ಕಿ ಮಿ ಸುತ್ತಲೂ ಬೇಲಿ ಹಾಕಿಸುವುದು.

9) ನಿಲ್ದಾಣದಲ್ಲಿ ಎಕ್ಸಲೇಟರ್ ಅಳವಡಿಸಿ, ತುರ್ತು ಸಂಧರ್ಭದಲ್ಲಿ ಅಂಬುಲೇನ್ಸ ಸಂಚಾರಿಸುವಂತೆ ಮಾಡುವುದು.

10) ಹಳಿಗಳ ಮಧ್ಯ ಇರುವ ಸಾರ್ವಜನಿಕ ರುಧ್ರಭೂಮಿಗೆ ರಸ್ತೆ ಸಂಪರ್ಕ ಕಲ್ಪಸುವುದು.
11) ವಾಡಿ ಯಿಂದ ಬಿದರ,ಬಿದರ ಯಿಂದ ವಾಡಿ ಯವರೆಗೆ,ದೌಂಡ್ ದಿಂದ ವಾಡಿಯವರೆಗೆ,ವಾಡಿ ಯಿಂದ ದೌಂಡ ವರೆಗೆ ರೈಲನ್ನು ವಿಸ್ತರಿಸುವುದು.

ಅಮೃತ್ ಭಾರತ್ ಸ್ಟೇಷನ್ ಅಡಿಯಲ್ಲಿ ಈ ವಾಡಿ ನಿಲ್ದಾಣ ಅಭಿವೃದ್ಧಿ ಕೈಗೊಂಡಿದ್ದರು ಯಾವುದೇ ಸಮರ್ಪಕ ಕಾರ್ಯ ವಾಗಿಲ್ಲ,ಈಗ ಈ ಅದು ಸ್ಥಗಿತ ಗೊಂಡಿದೆ.

ವಾಡಿ ವಿಭಾಗದಿಂದ ತಿಂಗಳಿಗೆ ಕೋಟ್ಯಾಂತರ ರಾಪಾಯಿ ಲಾಭ ಪಡೆಯುವ ಇಲಾಖೆ,ವಾಡಿ ನಿಲ್ದಾಣ ಅಭಿವೃದ್ಧಿ ಮಾಡದೆ,ಇಲ್ಲಿನ ಜನರಿಗೆ ಅನುಕೂಲ ಕೂಡಾ ಮಾಡದಿರುವುದು ದುರದೃಷ್ಟಕರ,
ಇದರ ಪ್ರತಿ ಕೇಂದ್ರ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಹಾಗೂ ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರಿಗೂ ಮೇಲ್ ಮಾಡಿದ್ದು,ಮೇಲ್ಕಾಣಿಸಿದ ಸಮಸ್ಯೆಗಳನ್ನು ತಾವು ಗಂಭೀರವಾಗಿ ಪರಿಗಣಿಸಿ ಆದಷ್ಟು ಬೇಗ ಪರಿಹರಸಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಶರಣಗೌಡ ಚಾಮನೂರ, ಯಮನಪ್ಪ ನವನಳ್ಳಿ,ಭೀಮಶಾ ಜಿರೋಳ್ಳಿ,ಶಿವಶಂಕರ ಕಾಶೆಟ್ಟಿ,ವೀರಣ್ಣ ಗೌಡ ಮೆಲಸೀಮಿ,ಚಂದ್ರಶೇಖರ ಹಾವೇರಿ,ಯಂಕಮ್ಮ ಗೌಡಗಾಂವ,ಉಮಾಭಾಯಿ ಗೌಳಿ,ಗೋಪಾಲ ರಾಠೋಡ, ಮನೋಹರ ಚವ್ಹಾಣ,ರವಿ ಚವ್ಹಾಣ,ರಾಮದಾಸ ಚವ್ಹಾಣ,ಶಂಕರ ಚವ್ಹಾಣ,ವಿನೋದ ರಾಠೋಡ ಸೇರಿದಂತೆ ಇತರರು ಇದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE